ಕನ್ನಡ ಸಾಹಿತ್ಯ ಸಮ್ಮೇಳನ


೩೦ ನೆಯ ಅಧಿವೇಶನ ಹರಪನಹಳ್ಳಿ

ಸಾಹಿತ್ಯ ಗೋಷ್ಠಿ

# ಅಧ್ಯಕ್ಷ ಭಾಷಣ

## ಸಾಹಿತಿಯ ಸಮಾಜ ದರ್ಶನ

ದಿನಾಂಕ ೭-೮ ಮೇ ೧೯೪೭ ಇ.



ಅಧ್ಯಕ್ಷರು,

ಸಿದ್ದಯ್ಯ ಕಲ್ಲಿನಾಥ ಶಾಸ್ತ್ರಿ ಪುರಾಣಿಕ ( ಕಾವ್ಯಾನಂದ )

From the beginning the illustrious poet has served men. Orphens has taught the horror of murder, Musaeus oracles and medicine, Hesiod agriculture, and divine Homer heroism. And 1, after Homer, have sung patroclus and Teuçer the lion-hearted to the end that every citizen may endeavour imitate great men." - Æschylus

" ಪೂರ್ಣಾನಂದೈಕ ರೂಪ ರಸ ಬೋಧಃ ರಸೋವೈಸಃ ಸವಿಷ ರಸಾನಾಮ್ ರಸತಮಃ "

ಅಧಿಕೃತ ಸತ್ ಪುರುಷಾರ್ಥ -
ಪ್ರಧಾನ ಧರ್ಮಾರ್ಥ ಕಾಮ ಮೋಕ್ಷಂಗಳವಾ
ಬುಧ ಜನ ವಿಪಕ್ತ ಕಾವ್ಯ -
ಪ್ರಧಾರಿತಾರ್ಥಂಗಳಖಿಳ ಭುವನ ಹಿತಂಗಳ್!

— ನೃಪತುಂಗ

" We will grieve not, rather find
Strength in what remains behind;
In the Faith that looks through death,
In years that bring the philosophic mind"
Wordsworth

" To defy power that seems omnipotent" — Shelly

" Art for arts' sake may be very fine; but art for progress is finer still" VictorHugo

" Art is a means of union among men, joining them together in the same feelings and indispensable. For the life and progress towards well being of individuals and of humanity" — Tolstoy



# ಸರ್ವಮಂಗಳೆಯಾದ ಸಾಹಿತ್ಯ ಸರಸ್ವತಿಗೆಶರಣು ಬಂದಿರುವ ಶರಣ ಶರಣೆಯರೆ,

ಈ ಕಲಾ ಕ್ಷೇತ್ರದಲ್ಲಿ ಸಮ್ಮಿಲಿತರಾಗಿರುವ ನಾವು ಆ ಜಗದಾದಿ ಕಲಾವಿದನಿಗೆ ತಲೆಬಾಗಿಯೇ ಮುಂದೆ ಸಾಗೋಣ:—

ಭೂಗಗನದ ವಿಸ್ತಾರದ ಮುಖರಂಗವ ಮಾಡಿ
ನಾಗಗಳನು ಭೂಷಣಗಳ ಅಂಗಾಂಗಕೆ ಮಾಡಿ
ಆ ಗರುವದ ಇನಶಶಿಗಳ ತಾಳಗಳನು ಮಾಡಿ
ಸಾಗರಗಳ ರಾಗಗಳನೆ ಸಂಗೀತವ ಮಾಡಿ
ಯೋಗದ ಡಮರುಗವನು ನುಡಿ ನುಡಿ ಸುತಲಾಡಿ
ಓಂಕಾರದ ಝೇಂಕಾರಕೆ ಕುಣಿವನು ಕಲೆಗಾರ

ನೆಲ ಬೆಳೆ ವನಜನ ನಗಖಗ ಮೃಗಕುಲ
ಜಲಜಕೆ ಜಲಧಿಗೆ ಜಲದಕೆ ಹೊಳೆಕೊಳ
ಮುಲರಿಗೆ ಅಳಿಕುಲ ತಳಿರಿಗೆ ನವಿಲಿಗೆ
ಬೆಳಗಿಗೆ ಸಂಜೆಗೆ ದಿವ ರಾತ್ರಿಗಳಿಗೆ
ಮಳೆಬಿಲ್ ಭುವಿ ಬಾನ್ ಸಚರಾಚರಕೇ
ಲಲಿತ ವರ್ಣಗಳ ಚೆಲುವನು ಕೊಡುತಿಹಕಲೆಗಾರ

ಕಾಲಕಂಬದ ಮೇಲೆ ನಡದ ಜೋಡುಗೆಯಿರಿಸಿ
ಮೇಲೆ ಮುಂಡದ ಭವ್ಯಗೋಪುರವ ನಿಲಿಸಿ
ಇಕ್ಕೆಲದಿ ಬಾಹುಗಳ ಬೊಂಬೆಗಳ ಸಿಂಗರಿಸಿ
ಮೇಲೆ ರುಂಡದ ರತ್ನ ಕಲಶವನು ಮೆರೆಸಿ
ಲೀಲೆಯಲಿ ಪ್ರಾಣದೇವನ ದಿವ್ಯ ದೇಗುಲವ
ಅನುದಿನವು ಕಟ್ಟುವನು ಕುಶಲ ಕಲೆಗಾರ

ನೆಲವ ಕಾಗದ ಮಾಡಿ ಜಲವ ಮಸಿಯನು ಮಾಡಿ
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ
ನೆಲವನಪ್ಪಿಹ ಮುಗಿಲ ನಾದಲೀಲೆಯ ಮಾಡಿ
ಹೊಳೆವ ಬೆಂಕಿಯಲಂಕಾರಗಳ ಮಾಡಿ
ಕೊಲುವ ಬಿದಿ ಯತಿ ಕಾಲ ತಾಲಗಳ ಜೋಡಿ
ಸಲೆ ಸೃಷ್ಟಿ ಕಾವ್ಯವನು ಬರೆಯುತಿಹ ಕಲೆಗಾರ

ಹೀಗೆ ಈ ವಿಶ್ವವುಆವನ ಕಲಾಕೃತಿ, ನರನ ಕಲೆಯದರ ಪ್ರತಿಕೃತಿ, ಆ ಶಿವ ಸೃಷ್ಟಿಯ ಪ್ರತಿಸೃಷ್ಟಿ ! ಅದೇಕೆ, ಏನೂತನ ಸೃಷ್ಟಿ ! ಪ್ರತಿ ಬಿಂಬವಲ್ಲ, ಪ್ರತಿಮೆಯಲ್ಲ, ಪ್ರತಿಸೃಷ್ಟಿ ಹೊಸ ಸೃಷ್ಟಿ ! ಕನ್ನಡ ಕಲೆಗಾರರ ಇಂಥ ಪುಣ್ಯ ಪೀಠಕ್ಕೆ ನನ್ನನ್ನೇರಿಸಿದ ತಮ್ಮ ಔದಾರ್ಯ ವೆನಿತೋ ! ಕುರಿತೋದಿದವನಲ್ಲ, ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಯಲ್ಲ, ಅರಿತವನಲ್ಲ, ನುರಿತವನಲ್ಲ, ಮರೆತವನೆಂದು ನನ್ನನ್ನಾರಿಸಿದಂತಿದೆ. ವಿದ್ಯಾರ್ಥಿ ದೆಸೆಯಲ್ಲಿ ಒಂದೆರಡು ಎಲೆ ಮೊಗ್ಗೆ ಹೀಚು ಮಿಡಿ ಬಿಟ್ಟಿದ್ದ ಈ ಬರೆಹದ ಬಳ್ಳಿ ಈಗ ಬಾಡುತ್ತಲಿರುವಂತಿದೆ– ಇದಕ್ಕಿಷ್ಟು ಹೃದಯರಸವನ್ನೆರೆದು ಮತ್ತೆ ಕೊನರಿ ನನೆ ಕೊನೆಯೇರುವಂತೆಸಗಬೇಕೆಂದು ತಾವುಬಗೆದಂತಿದೆ ನನ್ನ ಕರ್ತವ್ಯ ವಿಮುಖತೆಯ ಅರಿವು ಮಾಡಿ ಕೊಟ್ಟು ಕಾರ್ಯೋನ್ಮುಖತೆಯ ಪಾಠಕಲಿಸಿದ ತಮ್ಮ ಆತ್ಮೀಯತೆಗೆ, ಔದಾರ್ಯಕ್ಕೆ ತಲೆಬಾಗುವೆ ! ಕನ್ನಡದ ಸಾಹಿತ್ಯ ವಿದ್ಯಾರ್ಥರನೆಸಗೆ ಕನ್ನಡದ ವೇಧಾ ದೀಕ್ಷೆಯಿತ್ತಿದ್ದನು, ಇಲ್ಲಿಗೆ ಕರೆದು ತಾವು ಕನ್ನಡದ ಕ್ರಿಯಾದೀಕ್ಷೆಯಿತ್ತಿರಿ, ಇಲ್ಲಿ ನೆರೆವ ಕನ್ನಡ ಮಂತ್ರ ದೃಷ್ಟಾರರಿಂದ ನನಗೆ ಕನ್ನಡದ ಮಂತ್ರ ದೀಕ್ಷೆಯೂ ಆಗಬಹುದೆಂಬ ಆಸೆಯಿಂದ ಒಪ್ಪಿ ಬಂದಿದ್ದೇನೆ. ತಮ್ಮ ಅವಸರದ ಅಕ್ಕರೆಯ ಕಕ್ಕುಲತೆಯ ಕರೆ ಬಂದಾಗ ನನಗೆ ನೆನಪಾದುದು



ವರ್ಡ್ಸ್ ವರ್ತ್ ಕವಿಯ ‘ Small service is true service while it lasts: The Daisy by the shadow it casts protects the lingering dew - drop from the sun ” ಎಂಬ ಉಕ್ತಿ. ಈಗ ನೆನಪಾಗುತ್ತಲಿದೆ ಚೀಣದ ಜ್ಞಾನಿ ಕನ್‌ಫೂಶಿಯಸ್‌ನ ಈ ಉಕ್ತಿ. ‘‘ I only hand on; I can not create new things. ” ಕಾರಣ ನನ್ನಿಂದ ಏನನ್ನೂ ಹೊಸದನ್ನು ನಿರೀಕ್ಷಿಸದೆ ಹಿರಿಯರಾದ ತಾವು ಕೇಳಿದ್ದ ಕೇಳಿ ಸುಖಿಸಬೇಕೆಂದೂ ಕಿರಿಯರು ಹೊಸದೇನಾದರೂ ಕಂಡರೆ ಮುದದಾಳಬೇಕೆಂದೂ ಬೇಡುವೆ.

ನನ್ನ ಕಿಂಚಿಜ್ಞತ್ವದ, ಕಿಂಚಿತ್ ಕರ್ತೃತ್ವದ ಅರಿವಿದ್ದೂ ಇಂದು ಸಾಹಿತ್ಯಕಲೆಯ ಬಗ್ಗೆ ಬೇರೊಂದು ನೋಟವನ್ನು ಮಂಡಿಸಲಿದ್ದೇನೆ. ಖಂಡನೆಗೆ ಇದು ನಿಲ್ಲಲಿಕ್ಕಿಲ್ಲ. ಆದರೆ “ To give no occasion for attack is a negative perfection. It is fine to be open to attack. ” ಕಾರಣ ಸೈರಣೆಯಿಂದ ಲಾಲಿಸಬೇಕು.

೧೮೩೦ ರಲ್ಲಿ ಹುಟ್ಟಿದ ಕಲೆಗಾಗಿ ಕಲೆ ಯೆಂಬ ವಾದ ಇಂದಿಗೂ ಇತ್ಯರ್ಥವಾಗಿಲ್ಲ. ಆದರ ಪುರಸ್ಕರ್ತರ ವಿಚಾರಸರಣಿ ಹೀಗೆ ‘‘ ಕಲೆಯು ಧರ್ಮ ನೀತಿಗಳ ಸೇವೆಗಾಗಿಯೂ ಅಲ್ಲ . ಅದರ ಉದ್ದೇಶ ಆನಂದವಾಗಲೀ ಪ್ರಯೋಜನವಾಗಲಿ ಅಲ್ಲ ಧರ್ಮ ಧರ್ಮಕ್ಕಾಗಿ, . ನೀತಿ ನೀತಿಗಾಗಿ, ಕಲೆ ಕಲೆಗಾಗಿ. ಸೌಂದರ್ಯದ ಉದ್ದೇಶ ಪ್ರಯೋಜನ, ನೀತಿ ಪ್ರತಿ ಪಾದನ, ಪಾವಿತ್ರ್ಯಗಳಲ್ಲ, ಸೌಂದರ್ಯದ ದಾರಿ ಸೌಂದರ್ಯದ ಕಡೆಗೇ ಕರೆದೊಯ್ಯಬಲ್ಲುದು ” ಡಾಕ್ಟರ್ ಕೂಜೇನ್ [ ೧೮೬೭ ಕ್ಕೆ ಹಿಂದೆ ) ಈ ವಾದದ ಪ್ರವರ್ತಕರಲ್ಲೊಬ್ಬನಾದ ವ್ಹಿಕ್ಟರ್ ಹ್ಯೂಗೋನೇ ‘‘ ಇದನ್ನು ಮುಗಿಸುವ ಕಾಲ ಬಂದಿದೆ” ಯೆಂದು ಸಾರಿ, “ we conclude it in favour of a literature having in view this goal, “ The People. ” ಎಂದು ಶೀರ್ಷ

ಹೇಳಿದ್ದಾನೆ. ಆದರೂ ಇಂದಿಗೂ ಕಲೆಗಾಗಿ ಕಲೆಯೆನ್ನುವುದು ತಪ್ಪಿಲ್ಲ. ಸಾಹಿತ್ಯವು ಜೀವನದ ಮುಕುರವೋ, ಪ್ರತಿ ಬಿಂಬವೋ ವಿಮರ್ಶೆಯೋ ನಿದರ್ಶನವೋ ದರ್ಶನವೋ ಏನೇ ಇರಲಿ, ಅದು ಜೀವನದಿಂದ ಜೀವನಕ್ಕಾಗಿ ಹುಟ್ಟಿ ಜೀವನದಿಂದಲೇ ಪರಿಪೋಷಿಸಲ್ಪಡುವುದೆಂಬುದಕ್ಕೆ ಇದಿರು ಮಾತಿಲ್ಲ. ಎಂದ ಮೇಲೆ ಜೀವನಕ್ಕೆ ಏನಾದರೂ ಉದ್ದೇಶವಿದ್ದರೆ ಸಾಹಿತ್ಯಕ್ಕೂ ಇರಲೇ ಬೇಕಲ್ಲವೆ ? ಜೀವನಕ್ಕೂ ಏನೂ ಉದ್ದೇಶವಿಲ್ಲವೆಂದರೆ ಮನು ಪುರಾಣದ ಮಂಗಲಾಚರಣ ಮಾಡಿದಂತೆ. ಇವೆಲ್ಲ ಸಭೆ ಸಮ್ಮೇಲನ ಏಕೆ ಬೇಕು ? ನೂರು ಕನಸು ಕನಸುಗಳೇಕೆ ಬೇಕು ? ಅವುಗಳಗಾಗಿ ತ್ಯಾಗ, ಬಲಿದಾನ, ಹೋರಾಟಗಳೇಕೆ ಬೇಕು ? ಸಾಹಿತ್ಯವೇಕೆ, ಅಧ್ಯಾತ್ಮವೇಕೆ- ಎಲ್ಲ ವ್ಯರ್ಥ. ಹೇಗಾದರೂ ಎಂತಾದರೂ ಜೀವನ ನಡೆದೇ ಇದೆ. ಏನಿದ್ದೊಡೇನು, ಕೊನೆಗೆ ಮೂರು ಅಡಿ ಮಣ್ಣೇ ಇಹ ಜೀವನದ ಇತಿ ಶ್ರೀಯಲ್ಲವೆ, ತಸ್ಮಾತ್ ಸರ್ವ ಪ್ರಯತ್ನೇನ ಜಲಂ ತ್ಯಜ ಘೃತಂ ಪಿಬ !

ಹಾಗಾದರೆ ಜೀವನಕ್ಕೆ ಏನಾದರೂ ಉದ್ದೇಶವಿದೆಯೆ ? ಇರಲೇ ಬೇಕು. ಇಲ್ಲದಿದ್ದರೆ ಅದು ಜೀವನವಲ್ಲ ಜೀವನದ ಆಭಾಸ, ಉಸಿರ ಹೊರೆ, ನಿರ್ಜೀವ ಜೀವನ, ಉದ್ದೇಶರಹಿತವಾದ, ತತ್ವದಿಂದ ಸೂತ್ರಬದ್ಧವಾಗದ, ಯಾವುದೊಂದು ಪ್ರಬಲವಾದ ಧ್ಯೇಯದಿಂದ ಸ್ಫೂರ್ತಿಪಡೆಯದ ಜೀವನವು ಬೇಸತ್ತ ಬೇಸರಗೊಳಿಸುವ ಜೀವನವಷ್ಟೇ ಅಲ್ಲ, ನೀರಸ ಹಾಗೂ ನೀರಸಗೊಳಿಸುವ ಜೀವನವೆಂದು ಸಿ. ಈ. ಎಮ್. ಜೋಡನು ಹೇಳಿರುವುದು ನಿಜವಾದುದು. ಉದ್ದೇಶ ರಾಹಿತ್ಯವೆಂಬುದು ವಿಚಾರಧಾರೆಯ ವಿರೋಧಾಭಾಸ, ಇದಕ್ಕೆ ಅಂಟಿದವನಿಂದ ಹುಟ್ಟುವುದು ಸಜೀವ, ಸತ್ವಪೂರ್ಣ, ಶಕ್ತಿ ಶಾಲಿ ಸಂಜೀವಿನೀ ಸಾಹಿತ್ಯವಲ್ಲ, ಮೃತ ಸಾಹಿತ್ಯ; ಸಾಹಿತ್ಯವಲ್ಲ ಸಾಹಿತ್ಯದ ಕಳೇ ಬರ ! ಸಾಹಿತಿಯ ಜೀವನೋದ್ದೇಶ ಎಷ್ಟು ಉಚ್ಚ, ವ್ಯಾಪಕ, ಹಾಗೂ ಮಹತ್ತರವಾಗುವುದೋ ಅಷ್ಟು ಅವನ ಸಾಹಿತ್ಯವೂ ಸತ್ವಮಯವಾಗುವುದು. ತತ್ವಮಯವಾಗುವುದು, ತೇಜೋಮಯವಾಗುವುದು, ಪ್ರಭಾ ಪುಂಜರಂಜಿತವಾಗುವುದು- ನಿರರ್ಥಕವಲ್ಲ, ಸಾರ್ಥಕವಾಗುವುದು.



ಕನ್ನಡ ಸಾಹಿತ್ಯದಲ್ಲಿ ಒಮ್ಮೆ ರಾಜಭಕ್ತಿ ಜೀವನೋದ್ದೇಶವಾಗಿದ್ದಿತು, ಒಮ್ಮೆ ಮತ ಪ್ರಸಾರ ನೀತಿ ಪ್ರಚಾರಗಳು ಜೀವನಾದರ್ಶವಾಗಿದ್ದುವು; ಒಮ್ಮೆ ಪಾಂಡಿತ್ಯ ಪ್ರದರ್ಶನ ಉದ್ದೇಶವಾಗಿದ್ದರೆ ಒಮ್ಮೆ ತತ್ವವಿಚಾರ ಭಕ್ತಿ ಪ್ರಸಾರ ಲೋಕ ಕಲ್ಯಾಣಗಳು ಆದರ್ಶವಾಗಿದ್ದುವು. ನಿಜವಾದ ಜೀವನ ವಿಮರ್ಶೆಯನ್ನೊಳಗೊಂಡ ಲೋಕ ಶಿಕ್ಷಣದ ಸಜೀವ ಸಾಹಿತ್ಯದ ಜನಕ ಸರ್ವಜ್ಞ ಮೂರ್ತಿ.

ಅಲ್ಲಿಂದ ಇಂದಿನವರೆಗೆ ಜಗತ್ತು ಬಹುದೂರ ಮುಂದೆ ಹೋಗಿದೆ. ಮಾನವನ ಸಂಸ್ಕೃತಿಯೇ ಸಂದೇಹಸಂದೋಹವಾಗಿದೆ. ಯಾವುದು ಸಟೆ, ಯಾವುದು ದಿಟ ಯಾರು ನಿರ್ಣಯಿಸಬೇಕು ? ಎರಡು ಜಾಗತಿಕ ಯುದ್ಧಗಳಲ್ಲಿ ಹಳೆಯ ಸಂಸ್ಕೃತಿಯ ಸತ್ತ್ವಾಂಶಗಳು ಸುಟ್ಟು ಬೆಲೆಗಳು ಭಸ್ಮವಾಗಿವೆ. ಹಳೆಯ ಜಗತ್ತು ಕುಸಿದಿದೆ. ಹೊಸ ಜಗತ್ತು ಹುಟ್ಟಿಲ್ಲ, ಹುಟ್ಟುವುದರಲ್ಲಿದೆ. ನಮ್ಮ ಕಣ್ಣೆದುರಿಗೇ ಹುಟ್ಟುತ್ತಲಿದೆ. ಜೀವನದ ಹೊಸ ಬೆಲೆಗಳು ತಲೆದೋರ ತೊಡಗಿವೆ. ವಿಚಾರಗಳ ಅಮೃತ ಮಂಥನ ನಡೆದಿದೆ. ಅಮೃತವಿನ್ನೂ ಸಿಕ್ಕಿಲ್ಲ. ಸದ್ಯಕ್ಕೆ ಹಾಲಾಹಲ ಮಾತ್ರ ಹಬ್ಬಿ ಸುತ್ತಲೂ ಸುಡುತ್ತಲಿದೆ. ಕರದಲ್ಲಿ ಅಮೃತ ಕಲಶವನ್ನು ಹಿಡಿದು ವಿಶ್ವ ಚೇತನಕಾರಿಯಾಗಿ ಆಶಾದಾಯಿನಿಯಾಗಿ, ಮಂಗಲ ಮೂರ್ತಿಯಾಗಿ, ಪ್ರಾಣಪ್ರದಾತೆಯಾಗಿ, ಸರ್ವೋದಯದ ಸಂಜೀವಿನೀ ಶಕ್ತಿ ಸ್ವರೂಪಿಣಿಯಾಗಿ ಯಾವ ಭಾಗ್ಯ ಲಕ್ಷ್ಮಿ ಬರುವಳೋ ನೋಡಬೇಕು ! ಅವಳು ವಿಜ್ಞಾನ ಲಕ್ಷ್ಮಿಯೇ ಆಗಬಹುದೆ ? ಇದುವರೇನ ಅನುಭವ ಇಂಥ ಆಸೆಗೆ ಎಡೆ ಕೊಡಲೊಲ್ಲದು. ಪ್ರಕೃತಿಯ ದುರ್ಭೇದ್ಯ ಕೋಟೆಗಳನ್ನೊಡೆದು, ದುರ್ದಮ್ಯ ಶಕ್ತಿಗಳನ್ನು ಎದುರಿಸಿ, ಅನಂತ ಅಜೇಯ ವ್ಯೂಹರಚನೆಯನ್ನು ಭೇದಿಸಿ ಅವಳ ರಹಸ್ಯ ಪೇಟಿಕೆಯನ್ನು ವಶಪಡಿಸಿ ಕೊಳ್ಳಲು ಮಾನ

ವನಿಗೆ ಮಹತ್ವಾಕಾಂಕ್ಷೆಯನ್ನೂ, ವಿಜಿಗೀಷು ವೃತ್ತಿ, ಅಪಾರ ಶಕ್ತಿಗಳನ್ನೂ ಕರುಣಿಸಿದ ಈ ಮಹಾ ಶಕ್ತಿಯೇ ಇಂದು ಮಹಾ ಕಾಳಿಯಾಗಿ ಸಂಹಾರ ಸ್ವರೂಪಿಣಿಯಾಗಿದ್ದಾಳೆ, ವಿಶ್ವ ಸಂಜೀವಿನಿ ವಿಶ್ವ ಕಲ್ಯಾಣಿಯಾಗ ಬಲ್ಲಳೆ ? ಆಗುತ್ತ ಲಿರುವಳೆ ? ಏನೋ ! ಧರ್ಮದೇವತೆಗೆ ಆ ಭಾಗ್ಯ ದೊರೆಯ ಬಹುದೆ ? ಹಿಂದಿನಿಂದ ಇಂದಿನವರೆಗೆ ಧರ್ಮವು ಧಾರಣ ಕಾರ್ಯವನ್ನೂ ಮಾಡಿದೆ, ಮಾರಣ ಕಾರ್ಯವನ್ನೂ ಮಾಡಿದೆ. ಅವಳ ಹಣೆಗೂ ರಕ್ತದ ಕುಂಕುಮ ತಗುಲದಿಲ್ಲ ಧರ್ಮಗಳತವರಾದ ಏಷ್ಯಾದ ರಾಷ್ಟ್ರಗಳು ಇದುವರೆಗೆ ಪಾರತಂತ್ರ್ಯಪಂಕದಲ್ಲಿ ಮಿಳಮಿಳನೆ ಹುಳುಗಳಂತೆ ಕೊಳೆಯುತ್ತಿರುವುದೇಕೆ ? ನಮ್ಮ ನಾಡಿನಲ್ಲಿ ಇಂದು ಧರ್ಮದ ಹೆಸರಿನಲ್ಲಿ ರಕ್ತದೋಕುಳಿಯೇಕೆ ? ಸಮಾಜದಲ್ಲಿ ಸ್ಥಿರವಾಗಿ ಬೇರೂರಿರುವ ವೈಷಮ್ಯ, ಅನ್ಯಾಯ, ಕ್ರೌರ್ಯ, ಅಂಧಾಚರಣೆ, ಅಜ್ಞಾನಗಳೇಕೆ ? ಹಾಗಾದರೆ ಗತಿ ಯಾರು ? ಅರ್ಥ ಕಾರಣ, ರಾಜ್ಯಕಾರಣವೇ ಮೊದಲಾದ ಸಾಮಾಜಿಕ ಶಾಸ್ತ್ರಗಳೆ ? ಅವುಗಳ ಅನಾಹುತಗಳನ್ನು ಅನುಭವಿಸುತ್ತಲೇ ಇದ್ದೇವೆ. ಧರ್ಮ ನೀತಿಗಳ ಕಾರ್ಯಗಳನ್ನೂ ನಾವೇ ಮಾಡುವೆವೆಂಬ ಜಂಭದಿಂದ ಮಾನವನ ಮೂಲ ಭೂತ ಹಕ್ಕುಗಳೊ, ನಾಗರಿಕ ಸ್ವಾತಂತ್ರ್ಯಗಳೋ, ಶಾಸನ ಸಭೆಗಳೋ, ನ್ಯಾಯ ಮಂದಿರಗಳೋ ಏನೇನೋ ಉಪಾಯಯೋಜಿಸುತ್ತಿವೆ. ಆದರೆ ಕಾರಾ ಗೃಹಗಳು ಕೈದಿಗಳಿಂದ ತುಂಬಿದುವೇ ಹೊರತು ನೀತಿ ನೆಲೆಗೊಳಲಿಲ್ಲ. ಪ್ರೀತಿಯುಂಕುರಿಸಲಿಲ್ಲ, ಭೀತಿ ಬಯಲಾಗಲಿಲ್ಲ ಶಾಸನಗಳು ಹೆಚ್ಚಿದುವೇ ಹೊರತು ಶಾಸನ ಬದ್ಧತೆ ಬೆಳೆಯಲಿಲ್ಲ, ನ್ಯಾಯವಾದಿಗಳು ಹೆಚ್ಚಿದರು, ನ್ಯಾಯ ಬುದ್ಧಿ ಬೆಳೆಯಲಿಲ್ಲ. ಇದ್ದವರೊಡನೆ ಇಲ್ಲದವರ ವರ್ಗ ಯುದ್ಧ ತಲೆದೋರಿತು - ಆರ್ಥಿಕ ಸಮತೆ, ಸಾಮಾಜಿಕ ನ್ಯಾಯ, ಹಾಗೂ ನಿಯಮ ಬದ್ಧ ಸ್ವಾತಂತ್ರ್ಯಗಳು ಮೈದಳೆಯಲಿಲ್ಲ. ಇನ್ನುಳಿದುದು ತತ್ವಜ್ಞಾನ ಭಾರತೀಯ ತತ್ವಜ್ಞಾನಕ್ಕಿಂತ ಮಿಗಿಲಾದುದು ಇನ್ನೊಂಟೆ ? ವಿಚಾರದಲ್ಲಿ "ಅಹಂ ಬ್ರಹ್ಮಾಸ್ಮಿ, ಈಶಾ ವಾಸ್ಯ ಮಿದಂ ಸರ್ವಂ, ಸರ್ವಂ ಶಿವಮಯಂ ಜಗತ್, ಸರ್ವೇ ಜನಾಸ್ಸುಖಿನೋ ಭವಂತು, ತೇನತ್ಯಕ್ತೇನ



ಭುಂಜೀಥಾ: ಮಾಗೃಧ: ಕಸ್ಯಚಿದ್ಧನಂ, ಸಹನಾವವತು ಸಹನೌಭುನಕ್ತು ಸಹ ವೀರ್ಯಂ ಕರವಾವಹೈ, ಮಾವಿದ್ವಿಷಾವಹೈ ಸಮಾನೋಪ್ರಪಾ ಸಹ ಅನ್ನ ಭಾಗ: ಸಂಗಚ್ಛಧ್ವಂ ಸಂವದಧ್ವಂ ಏಕತ್ವ ಮನುಪಶ್ಯ. ಆದರೆ ಆಚಾರದಲ್ಲಿ ವರ್ಣದ್ವೇಷ, ಮಡಿ ಮೈಲಿಗೆ, ಸ್ಪೃಶ್ಯಾಸ್ಪೃಶ್ಯ ಭೇದ ಬುದ್ಧಿ, ಜಾತ್ಯಂಧತೆ, ಅಸಹಿಷ್ಣುತೆ, ಸ್ವಾರ್ಥಾಂಧತೆ, ಕೀಳು ಮನ ಕೀಳು ಭಾವ ಕೀಳು ಬುದ್ಧಿ ! ಎಲ್ಲಿವೆ ನಿಜಗುಣರು ಬೇಡಿದ ಆ 'ವಿತರಣದೊಡನೆ ಭೋಗಿಸುವರ್ಥದೊದವು, ಹಿತ ವಚನವೆ ತೊಡವೆನಿಪ ದಾನ, ಸಿರಿವಡೆದು ಜೀವಿಸುವೆಡೆಯಲಿ ವಿನಯ, ಪುಸಿಯ ನೆಳ್ಳಿಯನುಡಿಯದಿಹ ಸತ್ಯ, ಕೋಪವಂಟದ ತಪ, ರೂಪುಗಂಡೆಳಸದ ಕರಣ ವಿಜಯ, ಎಲ್ಲರೊಡನೆ ವೈರವಿಲ್ಲದೆ ಕೂರ್ಪ ಚಂದ, ಕಾಪಟ್ಯವಿಲ್ಲದ ಧರ್ಮರತಿ, ಧರೆಯೊಳು ತೃಧಿಕವೆನಿಪ ಶಾಂತಿ ?''

ವಿಜ್ಞಾನ, ಶಾಸ್ತ್ರ, ಧರ್ಮ, ತತ್ವಜ್ಞಾನ ಇವೆಲ್ಲ ಮಾನವನು ಕಂಡು ಹಿಡಿದ ಮಹಾ ಶಕ್ತಿಗಳು. ಆದರೆ ಮಾನವತೆಗೆ ಇವುಗಳಿಂದ ಉಪಕಾರಕ್ಕಿಂತ ಅಪಕಾರವೇ ಏಕೆ ಹೆಚ್ಚಾಗಿ ಆಗುತ್ತಿದೆ? ಎಲ್ಲಿಯೋ ಏನೋ ದೋಷವಿರಬೇಕು. ಏನದು ?

" ಈ ಜಗತ್ತಿನಲ್ಲಿ ಸಮಾಜದ ಪುನರ್ರಚನೆಗೆ ಬೇಕಾದ ಜ್ಞಾನವೂ ಶಕ್ತಿಯೂ ಇವೆ. ಆದರೆ ಹಾಗೆ ಮಾಡುವ ಇಚ್ಛಾ ಶಕ್ತಿ ಮಾತ್ರ ಇಲ್ಲ. ಹಾಗೂ ಗುರಿಯಿಟ್ಟು ಸಾಗಲು ಆದರ್ಶವಾವುದೂ ಇಲ್ಲ. ಜೀವನ ಪರಿಪೋಷಣೆಯ ರೀತಿಗಳನ್ನರಿತಿದ್ದೇವೆ. ಆದರೆ ಹೇಗೆ ಜೀವಿಸ ಬೇಕು, ಯಾತಕ್ಕಾಗಿ ಜೀವಿಸ ಬೇಕೆಂಬುದು ಗೊತ್ತಿಲ್ಲ ("...but not how to live nor what to live for.) ಆದ್ದರಿಂದ ವಿಜ್ಞಾನವಿಂದು ರಾಕ್ಷಸನ ಕೈವಶವಾಗಿದೆ. ಮಾನವತೆಗೆ ಒಳ್ಳೆ ತಪ್ಪುದಾವುದು, ಲೇಸಾವುದು ಕಂಡು ಹಿಡಿದು ಅದರ ಸಾಧನೆಗಾಗಿಯೇ ಜ್ಞಾನವು ನಮಗೀವ ಶಕ್ತಿಯನ್ನು ಉಪಯೋಗಿಸಬೇಕು. ಜ್ಞಾನಕ್ಕಾಗಿಯೇ ಜ್ಞಾನ, ಮಾನವ ಪ್ರೇಮವಿಲ್ಲದ ಜ್ಞಾನ [illegible] ಜಗತ್ತನ್ನು [illegible] ಜ್ವಾಲೆಯಲ್ಲಿ ನೂಕಿಬಿಟ್ಟಿ [illegible]

ನಮಗೆ ನೂತನವಾದ ನೈತಿಕ ನೋಟವೊಂದು ಬೇಕಾಗಿದೆ. ಅದು ಬರುವುದೆಲ್ಲಿಂದ ?" ಇದು ಗ್ರೀಷ್ಮ ಶಲ್ಲೆಯೇ ಪ್ರೊ. ಕ್ರೊ ಕೊಟ್ಟ ಎಚ್ಚರಿಕೆ ಎತ್ತಿದ ಪ್ರಶ್ನೆ. ಇದಕ್ಕೆ ಉತ್ತರ ಹುಡುಕ ಬೇಕಾಗಿದೆ. ವಿಜ್ಞಾನಿಗಳಿಗೆ ಜ್ಞಾನ ಶಕ್ತಿ ದರ್ಶನವಾಗಿದೆ ಆದರೆ ಶಿವದ ಶುಭದ ಮಂಗಲದ ದರ್ಶನವಾಗಿಲ್ಲ. ಕಾರಣ ಜೀವನ ದರ್ಶನವಿಲ್ಲ. ತತ್ವ ಜ್ಞಾನಕ್ಕೆ ಶಿವ ದರ್ಶನವಾಗಿದೆ, ಶಕ್ತಿ ದರ್ಶನವಾಗಿಲ್ಲ. ಕಾರಣ ಅದರ ಮುಗಿಲೆತ್ತರದ ಮಾತುಗಳು ಅರ್ಥಹೀನ ಅರಣ್ಯರೋದನ. ಶುದ್ಧ ವಿಜ್ಞಾನ, ಶುದ್ಧ ತತ್ವಜ್ಞಾನ ಶುದ್ಧ ಶಾಸ್ತ್ರಗಳೆಂಬ ಸೋಗಿನಲ್ಲಿ, ಜ್ಞಾನಕ್ಕಾಗಿ ಜ್ಞಾನವೆಂಬ ವೃಥಾಯಾಸ ವ್ಯರ್ಥ ಪರಿಶ್ರಮಗಳಲ್ಲಿ ಇವೆಲ್ಲ ಜೀವನದಿಂದ ದೂರಾಗಿ, ಜೀವನೋಪಯೋಗಿತ್ವದ ಒರೆಗಲ್ಲಿಗೆ ಹತ್ತದೆ ಗುಂಗೆಟ್ಟು ಉಪಾಯವಾಗದೆ ಅಪಾಯವಾದುವು, ಉಪಕಾರಕವಾಗದೆ ಅಪಕಾರಕವಾದುವು, ಜೀವನ ಪೋಷಕ ಜೀವನ ವಿಕಾಸಕಗಳಾಗದೇ ಜೀವನಾಶಕ ಜೀವನ ಶೋಷಕಗಳಾದುವು. ಇವುಗಳಿಂದ ಲೋಕ ಕಲ್ಯಾಣವಾಗಬೇಕಾದರೆ ಇವು ಜೀವನದೊಂದಿಗೆ ಸಾಮರಸ್ಯ ಸಿದ್ಧಿ ಪಡೆಯಬೇಕು, ಪ್ರಾಣ ಸಂಬಂಧ ಪಡೆಯಬೇಕು.

ವಿಜ್ಞಾನ ವಿಜ್ಞಾನಕ್ಕಾಗಿಯಲ್ಲಿ, ಜೀವನಕ್ಕಾಗಿ; ತತ್ವಜ್ಞಾನ ತತ್ವಜ್ಞಾನಕ್ಕಾಗಿಯಲ್ಲಿ, ಜೀವನಕ್ಕಾಗಿ; ಶಾಸ್ತ್ರ ಶಾಸ್ತ್ರತ್ವಕ್ಕಾಗಿಯಲ್ಲ, ಜೀವನಕ್ಕಾಗಿ; ಕಲೆ ಕಲೆಗಾಗಿಯಲ್ಲ, ಜೀವನಕ್ಕಾಗಿ. ಶುದ್ಧ ವಿಜ್ಞಾನ, ಶುದ್ಧ ಶಾಸ್ತ್ರ ತತ್ವಜ್ಞಾನಗಳಂತೆ ಶುದ್ಧ ಕಲೆಯೂ ನಿರರ್ಥಕ, ನಿರ್ಜೀವ ಲೀಲಾ ವಿಲಾಸ. ಕಲ್ಪನೆಯ ನಂದನದಲ್ಲಿ ಕಲೆಗಾಗಿ ಕಲೆಯೆಂಬ ಕಳ್ಳು ಕುಡಿದು ನಿರುದ್ದೇಶದ ನಿದ್ರೆ ಮಾಡುವ ನಿಷ್ಕ್ರಿಯತೆ ತೊಲಗದೇ ನಾಡಿಗೆ ಗತಿಯಿಲ್ಲ. ಎಲ್ಲ ಶಾಸ್ತ್ರ ಕಲೆಗಳ ಗುರಿಯೂ ಜೀವನದ ಶಕ್ತಿ ವಿಕಾಸ, ಅನಂತ ಶಕ್ತಿ ವಿಕಾಸ ವೆಂಬ ದೃಷ್ಟಿ ಬಲಿಯದವರೆಗೆ ಅವು ಮಾನವನ ಸಂಪತ್ತಲ್ಲ, ವಿಪತ್ತು; ಆಶೀರ್ವಾದವಲ್ಲ, ಅಭಿಶಾಪ.

ನಮಗೆ ಬೇಕಾದುದು ಶುದ್ಧ ತತ್ವಜ್ಞಾನವಲ್ಲ, ಅದರಿಂದೊದಗುವ ಶಿವದ ದರ್ಶನ; ಶುದ್ಧ ವಿಜ್ಞಾನವಲ್ಲ, ಶಿವದ ಸಾಧನೆಗೆ ಆದರಿಂದೊದಗ



ಶಿವವೂ ಶಕ್ತಿಯೂ ಒಂದನ್ನೊಂದು ಕೂಡದ ಕಾರಣ ಇಂದು ಜಗತ್ತು ಅಂಧ ತಮಸ್ಸಿನಿಂದ ಕೂಡಿದ ಅಸುರೀ ಲೋಕವಾಗಿದೆ. ವಿಜ್ಞಾನ ಬುದ್ಧಿಯಿಂದು ಚರಮಸಿದ್ಧಿಯನ್ನು ಪಡೆದಿದೆ. ಆದರೆ ಅದಕ್ಕೆ ಶಕ್ತಿಯುಪಾಸನೆಯೊಂದೇ ಗಮ್ಯವಾಗಿದೆ. ಶಿವಾರಾಧನೆ ಗುರಿಯಾಗಿಲ್ಲ. ಇವೆರಡರ ಕೂಡಲ ಸಂಗಮವಾಗದೇ ಮನುಕುಲಕ್ಕೆ ಮುಕ್ತಿಯಿಲ್ಲ. ಇವೆರಡೂ ಕೂಡಲು ಸಂಧಿ ಸ್ಥಾನವಾವುದು ? ಕಲೆ ಸಾಹಿತ್ಯ !

ಸರ್ ಜೇಮ್ಸ ಜೀನ್ಸ, ಸರ್ ಎಡ್ಡಿಂಗಟನ್, ಪ್ರೊಫೆಸಸ್ಪೈನ್ ಮೊದಲಾದ ವಿಖ್ಯಾತ ವಿಜ್ಞಾನಿಗಳು ಜಡಚೇತನಗಳ ಭಿತ್ತಿಗಳನ್ನೊಡೆದು ತತ್ವಜ್ಞಾನಕ್ಕೆ ಹತ್ತಿರ ಹತ್ತಿರ ಬರುತ್ತಲಿದ್ದಾರೆ. ಬರ್ಟರಂಡ್ ರಸೆಲ್, ಷಾ, ಯೋಗೀಶ್ವರ ಅರವಿಂದ ಮೊದಲಾದ ತತ್ವ ದರ್ಶಿಗಳು ವಿಜ್ಞಾನ ತತ್ವಜ್ಞಾನಗಳ ಸಮನ್ವಯ ಸಿದ್ಧಿಯಲ್ಲಿ ತೊಡಗಿದ್ದಾರೆ. ತತ್ಫಲವಾಗಿ ವಿಜ್ಞಾನ ಗ್ರಂಥಗಳೂ ಸಾಹಿತ್ಯವಾಗುತ್ತಲಿವೆ, ತತ್ವಜ್ಞಾನ ಗ್ರಂಥಗಳೂ ಸಾಹಿತ್ಯವಾಗುತ್ತಲಿವೆ. ಸಾಹಿತ್ಯ ತತ್ವಜ್ಞಾನಗಳ ನಂಟು ಹಳೆಯದು. ಆದರೆ ವಿಜ್ಞಾನವೂ ಇಂದು ಸಾಹಿತ್ಯದಲ್ಲಿ ಪ್ರವೇಶಿಸಿದೆ ವೆಲ್ಸನ ಕಾದಂಬರಿಗಳು ಸಾಹಿತ್ಯವನ್ನು ಪ್ರವೇಶಿಸಿದ ವಿಜ್ಞಾನ ಬುದ್ಧಿಗೆ ನಿದರ್ಶನಗಳಾದರೆ, This Blysterious Universe ದಂಥ ಗ್ರಂಥಗಳು ವಿಜ್ಞಾನವನ್ನು ಹೊಕ್ಕ ಸಾಹಿತ್ಯಕ್ಕೆ ಸಾಕ್ಷಿ. ಶ್ರೀ ಅರವಿಂದರಲ್ಲಿ ತತ್ವಜ್ಞಾನದ, ಸಾಹಿತ್ಯ ಮಮತೆಯು ಮೈವೆತ್ತು ನಿಂತಿದ್ದರೆ ರಾಜಕೀಯ ನಾಯಕರನೇಕರ ಆತ್ಮ ಚರಿತ್ರೆಗಳನೇಕ ರಾಜಕೀಯ ಸಮಸ್ಯ ವಿವೇಚನಾತ್ಮಕವಿದ್ದು ಸಾಹಿತ್ಯ ಗುಣಗಳ ಸಾಂದ್ರತೆಯಿಂದ ಶ್ರೇಷ್ಠ ಸಾಹಿತ್ಯವಾಗಿವೆ. ಹೀಗೆ ಸಾಹಿತ್ಯವು ವಿಜ್ಞಾನ ಶಾಸ್ತ್ರಗಳ ಶಕ್ತಿ, ತತ್ತ್ವಜ್ಞಾನದ ಶಿವಕ್ಕೆ ಸಂಗಮಸ್ಥಾನವಾಗಿ ಬಹುಕಾಲದಿಂದ ಬೇರಾಗಿರುವ ಅವೆರಡನ್ನೂ ತನ್ನಲ್ಲಿ ಒಂದುಗೂಡಿಸಿಕೊಳ್ಳುತ್ತ ನವಯುಗ ನಿರ್ಮಾಣ ಕಾರ್ಯಗೈಯುತ್ತಲಿದೆ; ಮಾನವ್ಯದ ನೆಲೆಬೆಲೆಗಳೆಲ್ಲವನ್ನೂ ಹೀಗೆ ತನ್ನಲ್ಲಿ ಸೇರಿಸಿಕೊಂಡು ಮಾನವತೆಯ ಮಹಾಮಂಗಲ ಗೀತೆಯಾಗುವದರಲ್ಲಿದೆ; ದಾರಿ ತಪ್ಪಿದ ಜನಕ್ಕೆ ಧ್ರುವತಾರೆಯಾಗಹತ್ತಿದೆ.

ಆದಿಯಿಂದಲೂ ಶಿವ ಸತ್ಯಸುಂದರಗಳ ಸಾಕ್ಷಾತ್ಕಾರವೇ ಮಾನವ್ಯದ ಮಹೋದ್ದೇಶವಾಗಿದೆ. ಆದರೆ ವಿಚಾರಿಸಿದರೆ ಈ ಮೂರರ ಅರ್ಥ ಒಂದೇ – ಶಿವ, 'ಹರನೆಂಬುದೇ ಸತ್ಯ ಸತ್ಯವೆಂಬುದು ಹರನು' ಎಂದು ರಾಘವಾಂಕ ಹಾಡಿದ್ದಾನೆ. "ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯವೆಂದು" ಕೀಟ್ಸ ಹಾಡಿದ್ದಾನೆ. ಕಾರಣ ಸತ್ಯಸುಂದರ ಶಿವಗಳ ಅಂತರಾರ್ಥ ಒಂದೇ - ಶಿವ. ಕಾರಣ ಇದುವರೆಗೆ ನಾವು ಸಾಹಿತ್ಯದಲ್ಲಿ ಶಿವೋಪಸನೆಯೊಂದನ್ನೇ ಮಾಡುತ್ತ ಬಂದಿದ್ದೇವೆ. (ಅಲ್ಲಲ್ಲಿ ಅಪವಾದಗಳುಂಟು) ಎಂದರೆ ಶಿವದ ಸ್ಥಾಯೀಗುಣಗಳಾದ ಚಿದಾನಂದಗಳೇ ನಮ್ಮ ಚರಮ ಗಮ್ಯವಾಗಿದ್ದಿತು. ಕಾರಣ ಸಾಹಿತ್ಯ ಸ್ವತ್ವಹೀನ, ಸತ್ವಹೀನವಾಯಿತು. ಈಗ ಶುಭದ ಜತೆಗೆ ಶಕ್ತಿಯ ಉಪಾಸನೆಯೂ ನಡೆಯಬೇಕಾಗಿದೆ. ಯಾಕೆಂದರೆ ಈ ಜಗತ್ತಿನಲ್ಲಿ ಇಪ್ಪುದರ (Being) ಜತೆಗೆ ಅಪ್ಪುದೂ (Becoming) ನಡೆದಿದೆ. 'ಇಪ್ಪುದು' ಆತ್ಮಶಕ್ತಿವಿಕಾಸದಿಂದ 'ಅಪ್ಪು'ದಾಗಿ ಸೃಷ್ಟಿಗೆ ಕಾರಣವಾಗುತ್ತದೆ. ಚಿತ್; ಆನಂದ ಇವು ಅಖಂಡವಾದ ಸ್ಥಾಯೀ ಗುಣಗಳಾದಕಾರಣ ಇವುಗಳಿಗೆ ವಿಕ್ಷೋಭನ ಶಕ್ತಿಯಿಲ್ಲ. ಕಾರಣ, ಇವುಗಳಿಂದ ಸೃಷ್ಟಿ ಸಾಧ್ಯವಿಲ್ಲ. ವಿಕ್ಷೋಭನ ಶಕ್ತಿಯಿರುವುದು ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳಿಗೆ ಇವುಗಳಿಂದಲೇ ಸೃಷ್ಟಿಯ ರೂಪಲೀಲೆ, ಪರಿವರ್ತನದ ಪ್ರಯೋಗಶಾಲೆ, ಜೀವನದ ಅನಾದ್ಯಂತ ಲೀಲೆ, ಸೃಷ್ಟಿಕಲೆ. "ಆತ್ಮಶಕ್ತಿ ವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ" "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ- ಸ್ವಾಭಾವಿಕೀ ಜ್ಞಾನಬಲ ಕ್ರಿಯಾಚ." 'ನಹಿ ತಯಾವಿನಾ ಪರಮೇಶ್ವರಸ್ಯ ಸೃಷ್ಟೃತ್ವಂ ಸಿಧ್ಯತಿ. ಶಕ್ತಿ ರಹಿತಸ್ಯ ತಸ್ಯ ಪ್ರವೃತ್ತ್ಯನುಪಪತ್ತೇ:" (ಬ್ರ. ಸೂ. ಶಾಂ. ಭಾ. ೧-೪ - ೩) ಶಕ್ತಿಯ ಸಹಾಯವಿಲ್ಲದೆ ಈಶ್ವರನಿಗೆ ಸೃಷ್ಟೃತ್ವ ಸಾಧ್ಯವಿಲ್ಲ. ಶಕ್ತಿಯ ಸಹಾಯವಿಲ್ಲದೆ ಸಾಹಿತಿ ಕಲೆಗಾರನಿಗೂ ಸೃಷ್ಟೃತ್ವ ಶಕ್ಯವಿಲ್ಲ ಈ ಶಕ್ತಿಯ ಸಹಾಯದಿಂದಲೇ ಸೃಷ್ಟಿಕಾರ್ಯವೈದು ಆರಂಭದಲ್ಲಿ ಹಾಡಿದಂತೆ ದೇವನು ಸೃಷ್ಟಿಯ ಸರ್ವ ಪ್ರಥಮ ಕಲೆಗಾರನಾಗಿದ್ದಾನೆ. ಈ ಶಕ್ತಿಯ ಸಹಾಯದಿಂದಲೇ ಪ್ರತಿಸೃಷ್ಟಿಗೆ, ವಿನೂತನ ಸೃಷ್ಟಿಗೆ ಸಮರ್ಥ



ನಾಗಿ ಕಲೆಗಾರನು ದೇವನಿಗೂ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ- ಇಪ್ಪುದರ ಜತೆಗೆ ಅಪ್ಪುದನ್ನು ರೂಪಿಸಿ ಪ್ರಕಾಶಿಸಿ, ಶಿವನಿಗಿಂತ ಶಿವಭಕ್ತರು ಮೇಲಲ್ಲವೆ? "ಜನಜೀವನದ ರಸಭಾವದ ಬೀಜ ಕವಿಯ ಅನುಭೂತಿಯ ಬಸಿರಿನಲ್ಲಿ ನಿಂತು, ಮಾಗಿ ಹೊರಹೊಮ್ಮಿದಾಗ ಅದು ಹೊಸಬದುಕು, ಹೊಸಸೃಷ್ಟಿ. "ಕೈಲಾಸಂ" ಇರುವುದರ ಹೊಟ್ಟೆಯಲ್ಲಿ ಆಗುವುದರ ಧ್ವನಿ ಹೇಗೆ ಮೊಳಗುತ್ತಿದೆಯೆಂಬುದನ್ನು ಸಾಹಿತ್ಯ ರೂಪಕೊಟ್ಟು ಪ್ರಕಾಶಿಸಬೇಕು. (ಅಂಬಿಕಾತನಯದತ್ತ)

'ಅಚೇತನಕ್ಕೆ ಸಚೇತನದ ರೂವಾರಿಯಾಗುವ ಸಂಧಿಯೀವುದೂ ಹಾಗು ಪ್ರಕೃತಿಯೊಡನೆ ವಿಜ್ಞಾನ ಪರಿಭಾಷೆಯಲ್ಲಿ ತಾದಾತ್ಮ್ಯ ಅಥವಾ ಸ್ಥಿತತ್ವ (Communion or equilibriuns) ವೆಂದು ಹೇಳಲಾಗಿರುವಂತಹ ಸಂಬಂಧವನ್ನಿಟ್ಟುಕೊಳ್ಳುವುದೂ ಪ್ರಕೃತಿಯು ಮಾನವ ಪ್ರಕೃತಿಯ ಮೇಲೆ ಸ್ವಾಮಿತ್ವ ಸ್ಥಾಪಿಸಿತೆಂಬುದನ್ನು ಒಪ್ಪಿದಂತೆ ಪ್ರಕೃತಿ ಶಕ್ತಿಗಳಿಗೆ ಶರಣಾಗತನಾಗದೇ ಅವುಗಳೊಡನೆ ಹೋರಾಡುವದರಲ್ಲಿಯೇ ಮಾನವನ ಶಕ್ತಿರಹಸ್ಯ. ಇರುವುದರೊಡನೆ ಹೋರಾಡುವದು ಇಲ್ಲದುದು ಹುಟ್ಟಲೆಂಬ ಹಿರಿಗುರಿಯಿಂದ ಹೀಗೆ ಮಾಡುವುದೇ ಆರೋಗ್ಯ ಲಕ್ಷಣ. ಜೀವನ. ಇದನ್ನುಳಿದುದೆಲ್ಲ ವಿಕಾಸದತ್ತ ಅಲ್ಲ. ವಿನಾಶದತ್ತ ಒಯ್ಯುವಂತಹದು. ದೇವನೂ ಜೀವನೂ ಇಬ್ಬರೂ ಅವಿಚ್ಛಿನ್ನ ಸೃಷ್ಟಿಕಾರ್ಯದಿಂದಲೇ ಸ್ಥಿರವಾಗಿ ಜೀವಿಸಿದ್ದಾರೆ. ಯಾವ ಕಲೆಗಾರನು ಜೀವನದೊಡನೆ ಹೋರಾಡುತ್ತಾನೆಯೋ ಅವನು ಮಾನವ್ಯದ ಮಹತ್‌ಶಕ್ತಿ. ಅವನು ಸೃಷ್ಟಿಯಲ್ಲಿ ಶಿವನಿಗೆ ಸರಿ. ಅವನ ಆತ್ಮದಲ್ಲಿ ತತ್ಕಾಲ ಅನಂತಕಾಲಗಳ ಪಡಿನೇಳಲಿರುತ್ತದೆ. ಇಂದಿನ ಕಲೆಗಾರನು ಪ್ರಕೃತಿಯಿಂದ ಸ್ಫೂರ್ತಿಪಡೆಯುತ್ತಾನೆ. ಆದರೆ ಪ್ರಕೃತಿ 'ಇರುವುದು' ಅಷ್ಟೇ. ನಮ್ಮ ಪ್ರಯತ್ನದಲ್ಲಿ ಎಡರು ತೊಡರಿಸುವದಷ್ಟೇ ಅದರ ಕಾರ್ಯ ನಾವುಮಾಡುವುದು ಇದ್ದುದರ ಸಲುವಾಗಿ ಅಲ್ಲ, ಆಗುವದರ ಸಲುವಾಗಿ. ಇದನ್ನು ಕಲೆಗಾರನು ತನ್ನ ಅಸ್ತಿತ್ವದ ಅಂತರಾಳದಿಂದ ಪಡೆಯುತ್ತಾನೆ.

(ಡಾಕ್ಟರ ಸರ್ ಮುಹಮ್ಮದ ಎಕಬಾಲ.)

ಹೀಗೆ ಇದ್ದುದರ ಪ್ರತಿಬಿಂಬ, ಛಾಯಾಗ್ರಹಣ ಕಲೆಯಲ್ಲಿ, ಸಾಹಿತ್ಯವಲ್ಲ, ಇದ್ದುದರೊಡನೆ ಹೋರಾಟ, ಆಗುವದರ ಚಿತ್ರಣ, ಆಗಬೇಕಾಗಿರುವುದರ ನಿದರ್ಶನ, ಆದರೆ ಕಾರ್ಯ. ಇದೇ ಸಾಹಿತಿಯು ದರ್ಶನ "ಕವಿಕೃತಿಯಾದ ಕಾವ್ಯವೂ ಈಶ್ವರ ಕೃತಿಯಾದ ವಿಶ್ವಸೃಷ್ಟಿಗೆ ಸದೃಶವಾದ ಒಂದು ಪ್ರತುಮೆ ( ಪ್ರತಿಸೃಷ್ಟಿ ) ಕವಿಕೃತಿಯೂ ತನ್ನದೇ ಆದ ಒಂದು ಸ್ವಾತಂತ್ರ್ಯವನ್ನೂ ಶಕ್ತಿಯನ್ನೂ ಪಡೆದಿದೆ. ವಿಶ್ವವು ಹೇಗೆ ಯತಚಿತ್ ಸತ್ಯಾರ್ಥ ಪ್ರಕಾಶನದ ಒಂದು ವಿರಾಟ್ ಪ್ರತಿಮೆ ( ಕಲಾಕೃತಿ ) ಯೋ ಹಾಗೆ ಮಹಾಕಾವ್ಯವೂ ಮಹಾಕವಿಯ ' ದರ್ಶನ ' ಪ್ರಕಾಶನದ ಒಂದು ಮಹಾಪ್ರತುಮೆ (ಮಹಾಸೃಷಿ,) ಆದರ್ಶನದ ಉಜ್ವಲತೆಗೂ ಉದಾತ್ತತೆಗೂ ಅನುಗುಣವಾಗಿ, ಅನುರೂಪವಾಗಿ ಅವನ ಪ್ರತುಮೆ ( ಪ್ರತಿಸೃಷ್ಟಿ ) ಸಿದ್ಧವಾಗುತ್ತದೆ- ಅವನ ದರ್ಶನಕ್ಕೆ ಅವನ ಅತ್ಮಸಿದ್ಧಿ ಅಧಾರ. ಆ ಆತ್ಮಸಿದ್ಧಿ ಅಥವಾ ಸಾಕ್ಷಾತ್ಕಾರ ( ಅಂತ:ಶಕ್ತಿ ವಿಕಸನ ) ಎಷ್ಟು ಹಿರಿದಾಗಿದ್ದರೆ ಅವನ ಕೃತಿ ಅಷ್ಟು ಹಿರಿದಾಗುತ್ತದೆ. ಮಹತ್ತಾಗುತ್ತದೆ. ಕುವೆಂಪು. ( ಕೌಂಸಿನಲ್ಲಿ ಬಂದ ಶಬ್ದ ನನ್ನವು )

ಎಕಬಾಲ ಕುವೆಂಪು ಹೇಳದಂತೆ ಸಾಹಿತಿಯ ದರ್ಶನಕ್ಕೆ ಅವನ ಆತ್ಮಶಕ್ತಿಯ ಇಚ್ಛಾಜ್ಞಾನ ಕ್ರಿಯಾಸಕ್ತಿಗಳ ಪ್ರಖರಸಾದ ಅನಂತ ವಿಕಾಸವೇ ಆಧಾರ. ಇದಕ್ಕೆ ಮೊಬಲು ವಿಶ್ವವನ್ನು ನೋಡಿದಾಗ ಅವನ ಕೃತಿ ಇದ್ದುದರ ಪಡಿನೆಳಲು, ಇಲ್ಲವೇ ಅರ್ಥರಹಿತ ಆತ್ಮಕಥನ. ಸಾಹಿತ್ಯವು ಆತ್ಮಕಥನವೂ ಅಲ್ಲ, ಮಥನವೂ ಅಲ್ಲ, ಜೀವನದ ನಿರ್ಜೀವ, ಚಿತ್ರಣವೂ ಅಲ್ಲ. ಅತ್ಮಾಭಿವ್ಯಕ್ತಿಯಲ್ಲಿ ಆತ್ಮ ಸಮಾಜೀಕರಣ, ಆತ್ಮಾಭಿವ್ಯಕ್ತಿಯಲ್ಲಿ ವಿಶ್ವರಹಸ್ಯಾಭಿವ್ಯಕ್ತಿ. ಸಮಾಜದ ಆತ್ಮೀಕರಣ, ಆತ್ಮ ಸಮಾಜೀಕರಣ, ಇದ್ದುದರ ಪರಿವರ್ತನ, ಆಗುತ್ತಿರುವುದರ ಚಿತ್ರಣ, ಬರಲಿರುವುದರ ದರ್ಶನ! ಇದಾಗಲು ಮೊದಲು ಅಂತ:ಶಕ್ತಿಯ ಅನಂತ ವಿಕಾಸವಾಗಬೇಕು. ಬೂದಿಯನ್ನು ಊದಿದರೆ ಬೆಂಕಿ ಹುಟ್ಟೀತೆ ? ಶಕ್ತಿ ವಿಕಾಸದಿಂದ ವ್ಯಕ್ತಿತ್ವಸಿದ್ಧಿ, ಸಾಹಿತ್ಯವು ವ್ಯಕ್ತಿತ್ವದ ಲೀಲೆ. ಈ ವ್ಯಕ್ತಿತ್ವವು ಸ್ಫುರಿಸಿ ಸ್ಫುಟಿಗೊಂಡಮೇಲೆ ವಿಶ್ವವನ್ನು ನೋಡಿದಾಗ ವಿಶ್ವ



ರಹಸ್ಯಗಳೆಲ್ಲ, ಜೀವನ ರಹಸ್ಯಗಳೆಲ್ಲ, ಇಪ್ಪುದೆಲ್ಲ, ಅಪ್ಪುದೆಲ್ಲ, ಬಪ್ಪುದೆಲ್ಲ, ಇರಬೇಕಾದುದೆಲ್ಲ, ಬರಬೇಕಾದುದೆಲ್ಲ, ಆಗಬೇಕಾಧುಥೆಲ್ಲ, ಅವನ ವಾಣಿಯಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಆಗ ಅವನು ವರ್ತಮಾನದ ಶಿಲ್ಪಿ, ಭವಿತವ್ಯದ ಪ್ರವಾದಿಯಾಗುತ್ತಾನೆ. ಹೊಸಯುಗದ ಹೊಸಜಗದ ಅಘಟಿತ ಘಟನಾ ನೂತನ ಬ್ರಹ್ಮನಾಗುತ್ತಾನೆ. ' ಯಥಾ ಸ್ಮೈರೋಚ್ಯತೇ ವಿಶ್ವಂ ತಥೇದಂ ಪರಿವರ್ತತೇ: '.

ಕವೀಂದ್ರ ರವೀಂದ್ರರ ಈ ಉಕ್ತಿಯನ್ನಾಲಿಸಿ. ' For creation is freedom. It is a prison to have to live in what is; For it is living in what is not ourselves. There we helplessly allors nature the choose us and choose for us, and thus we come under the law of natural selection. But in our creation we live in what is ours, and there more and more the world becomes the world of our selection; it moves with our movements and gives way to us according to the true we take. Thus we find that man is not content with the world that is given to him; he is bent upon making it is own world."

"ಮಮ ಮಾಯಾ ದುರತ್ಯಯಾ, ಪ್ರಕೃತಿಸ್ತ್ವಂ ನಿಯೋಕ್ಷ್ಯತಿ ಸ್ವಭಾವಜೇನ ಕಾಂತೇಯ ನಿಬದ್ಧ: ಸ್ವೇನ ಕರ್ಮಣಾ " ಎಂಬ ಭಾಷೆ ದೇವನದು. ಕೊಲುವೆನೆಂಬ ಭಾಷೆ ದೇವನದು. ಗೆಲುವೆನೆಂಬ ಭಾಷೆ ಭಕ್ತನದು, ಎಂದು ಅದಕ್ಕೆ ಕವಿ ಪಂಡಿತ, ಗಾಯಕ ಚಕ್ರವರ್ತಿ, ಯ ಉತ್ತರ! ಈ ಜಗತ್ತು ನಮ್ಮ ಕೈವಶವಾಗಿಲ್ಲ, ನಮ್ಮದಾಗಿಲ್ಲ. ಆದನ್ನು ವಶಪಡಿಸಿಕೊಂಡು ನಮ್ಮದ

ನ್ನಾಗಿ ಮಾಡಿಕೊಳ್ಳಬೇಕು. ಈಗಿದ್ದುದಕ್ಕಿಂತ ಮಂಗಲಮಯ, ಸುಭದ್ರ ಶಿವಮಯವನ್ನಾಗಿ ಮಾಡಬೇಕು. ಈಸಬೇಕು. ಇದ್ದು ಜೈಸಬೇಕು. ಈಗಿದ್ದುದನ್ನು ಈಸಬೇಕು. ಇಲ್ಲದುದನ್ನು ಜೈಸಬೇಕು. ಪ್ರಕೃತಿಮಯವಿದ್ದುದನ್ನು ಸಂಸ್ಕೃತಿಮಯವಾಗಿ ಮಾಡಬೇಕು. ಪ್ರಾಕೃತಿಕ ಜೀವನವನ್ನು ಜೈಸಿ ಸಾಂಸ್ಕೃತಿಕ ಜೀವನದಲ್ಲಿ ಮಾನವತೆಯನ್ನು ಪ್ರತಿಷ್ಠಾಪಿಸಬೇಕು. ಈ ಸೃಷ್ಟಿ ಶಿವಸೃಷ್ಟಿಯಾಗಬೇಕು. ಅದಕ್ಕೆ ನಮ್ಮಲ್ಲಿ ಶಿವಜ್ಞಾನ, ಶುಭೇಚ್ಛೆ, ಮಂಗಲ ಕಾರ್ಯಗಳ ಅಪ್ರತಿಮ ಶಕ್ತಿಯ ಆವಿರ್ಭಾವವಾಗಬೇಕು. ಈ ಶಿವದದರ್ಶನ ಶಕ್ತಿಯ ಸಾಕ್ಷಾತ್ಕಾರಗಳನ್ನು ಮೊದಲು ತನ್ನಲ್ಲಿ ಸಾಧಿಸಿ 'ಸಿದ್ಧ'ನಾಗಿ, ವ್ಯಕ್ತಿಗಳಲ್ಲಿ ತನ್ನ ಶಕ್ತಿಯನ್ನು ತುಂಬಿ ಆಶಕ್ತಿಯನ್ನು ಶಿವದ ಸಾಧನೆಯಲ್ಲಿ ತೊಡಗಿಸಿ ಸಮಾಜದ ಸರ್ವ ಶಕ್ತಿಗಳಿಗೆ ಶಿವ ದರ್ಶನ ಮಾಡಿಸಿ, ಸರ್ವ ವ್ಯಕ್ತಿಗಳಿಗೂ ಶಕ್ತಿದರ್ಶನ ಮಾಡಿಸಿ ನೂತನ ಶುಭತರ ಶಿವತರ ಮಂಗಲಕರ ಸುಭದ್ರ ಸಮಾಜ ಸೃಷ್ಟಿಗೆ. ಸುಂದರತರ ಸುಖಕರ ಶಾಂತಿಪ್ರದ ಹೊಸಯುಗ ಹೊಸ ಜಗದ ಸೃಷ್ಟಿಗೆ, ಪ್ರಸ್ಫುರಣೆ' ಪ್ರೇರಣೆ, ಪ್ರಚೋದನೆಗಳನ್ನೊದಗಿಸುವವೇ ಕಲೆಯ ತಪಸ್ಸು ಸಾಹಿತಿಯು ಸಮಾಜದೆದುರಿಡುವ ದರ್ಶನ. ಶಕ್ತಿಗೆ ಶಿವದ ಸೂತ್ರ ಕಟ್ಟಿ ಶಿವಕ್ಕೆ ಶಕ್ತಿಯ ಸಹಾಯ ಒದಗಿಸಿ ಶಕ್ತಿಯು ಅಶುಭವನ್ನೆಸಗದಂತೆಯು ಶಿವವು ಶಕ್ತಿವಿಹೀನವಾಗದಂತೆಯೂ ಸಮಾಜವನ್ನು ಸಜ್ಜುಗೊಳಿಸುವದೇ ಅವನ ಸಮಾಜ ದರ್ಶನ. ವಿಜ್ಞಾನ ಬುದ್ಧಿ ತತ್ವ ಸಿದ್ಧಿಗಳಿಗೆ ಸಂಗಮಸಾಧನವಾಗಿ ಆವೆರಡರ ಸಮ್ಮಿಲಿತ ಶಕ್ತಿಯಿಂದ ನೂತನ ಸೃಷ್ಟಿ ನಿರ್ಮಾಣವೇ ಅವನು ನಮ್ಮೆದರು ಮಂಡಿಸುವ ಮಹೋದ್ದೇಶ, ಆದರ್ಶ!

—



ವಿಜ್ಞಾನವು ಈ ವಿಶ್ವದಲ್ಲಿ ನಿರಂತರ ನಡೆದಿರುವ ವಿವರ್ತನ (*Evolution*) ವು ಉದ್ದೇಶ ವಿರಹಿತವಾಗಿರದೆ ಉದ್ದೇಶ ಪೂರ್ಣವಾಗಿದೆ; ಪ್ರಕೃತಿಯಲ್ಲಿ ನಡೆದಿರುವ ಪ್ರತಿಯೊಂದು ರೂಪಾಂತರವೂ ಮುನ್ನಿದ್ದುದಕ್ಕಿಂತ ಹೆಚ್ಚು ಪೂರ್ತತೆಯ ಕಡೆಗೆ ಸಾಗಿದೆ ಯೆಂದು ಸಿದ್ಧ ಮಾಡಿದೆ. ಜಡ ಚೇತನಗಳ (*Matter and Mind*) ಭೇದವಾದ ಮುಗಿದು ಅವೆರಡೂ ಪರಸ್ಪರ ಪರಿವರ್ತನೀಯಗಳೆಂದೂ ಪ್ರಕೃತಿಯ ಪ್ರತಿ ಪರಿವರ್ತನವೂ ಪೂರ್ಣತೆಯ ಕಡೆಗೆ ಸಾಗಿದೆಯೆಂದೂ ಸರ್ ಜೇಮ್ಸ್ ಜೀನ್ಸ, ಸರ್ ಎ. ಎಸ್. ಎಡ್ಡಿಂಗ್‌ಟನ್ನರವಾದ. "*With Emerson we see the worm stirring to be a man, mount through all the spires of form We see the growing emancipation of mind and this gives Evolution its purpose Sir G. A. Thomposn*"

ಜಡದಲ್ಲಿ ಅಂತರ್ಲೀನವಾದ ಚೇತನಸತ್ತುಗಳು ವಿವರ್ತನ ಪಥದಿಂದ ಮತ್ತೆ ತಮ್ಮನ್ನು ನಿರ್ಮುಕ್ತಗೊಳಿಸಲು ಯತ್ನಿಸುತ್ತಿರುವುವೆಂದೂ, ಚೇತನಾರಹಿತವಿದ್ದುದರಲ್ಲಿ ಚೇತನೆಯ ಪ್ರಾದುರ್ಭಾವ ವಾಗುವುದೆಂದೂ, ಹೀಗೆ ಮನುಷ್ಯನು ವಿವರ್ತನ ಪಥದಲ್ಲಿ ಮುಂದುವರಿದಂತೆ ತನ್ನ ಚೇತನದ ಪರಿವರ್ತನದ ಫಲಸ್ವರೂಪವಾಗಿ ತನ್ನ ಅಂತಃಪುರುಷನಿಗೆ ಯಥಾ ಯೋಗ್ಯ ವಾಹನ ವಾಗಬಲ್ಲ ಅತಿಮಾನಸ ಸತ್ಯಾತ್ಮಕ ಚೇತನದ ಆವಿರ್ಭಾವವಾಗಿ, ಅದರಿಂದ ಮನುಷ್ಯನು ತನ್ನನ್ನು ಅಂತರ್ ಬಾಹ್ಯ ಜಗತ್ತುಗಳೆರಡರಲ್ಲೂ ಕಂಡು ಕೊಂಡು, ಪಾಶವಿಕ ವೃತ್ತಿ ಪರಿಪೂರ್ಣ ಮನುಷ್ಯತೆಯನ್ನು ಅತಿಕ್ರಮಿಸಿ ದೇವಜಾತಿಯಾಗಿ ಮಾರ್ಪಡುವುದು ಸಾಧ್ಯವಿದೆ ಯೆಂದೂ ಸಾರಿ "ಓಂ ದೇವಾಯ ಜನ್ಮನೇ" ಎಂದು ಶ್ರೀ ಅರವಿಂದರು ತಪೋಮಗ್ನರಾಗಿದ್ದಾರೆ. ಭಕ್ತನೆನಿಸುವನಯ್ಯ ಮೆಲ್ಲ ಮೆಲ್ಲನೆ,

ಯುಕ್ತನೆನಿಸುವನಯ್ಯ ಮೆಲ್ಲ ಮೆಲ್ಲನೆ, ಎಡರು ತೊಡರುಗಳ ದಾಟಿ ಬರಬರ ಲಿಂಗೈಕ್ಯನೆನಿಸುವನಯ್ಯಾ ಮೆಲ್ಲ ಮೆಲ್ಲನೆ, ಎಂದು ಶರಣರು ಸಾರಿದ್ದಾರೆ.

ಹೀಗೆ ಈ ಸೃಷ್ಟಿಯೂ ಉದ್ದೇಶರಹಿತವಾದುದಲ್ಲ; ಇದರಲ್ಲಿ ನಡೆದ ವಿವರ್ತನ ಪ್ರತ್ಯಾವರ್ತನಗಳೂ ಉದ್ದೇಶರಹಿತವಾದವುಗಳಲ್ಲ ಇದರ ಮೇಲೆ ನಡೆದಿರುವ ಜೀವೋತ್ಪತ್ತಿ ಜೀವ ಪುನರಾವೃತ್ತಿಗಳೂ ಉದ್ದೇಶರಹಿತವಾದವುಗಳಲ್ಲ; ಮಾನವ ಜೀವನವೂ ಉದ್ದೇಶ ವಿರಹಿತವಾದುದಲ್ಲ. ಸ್ಥಿತಿಶೀಲ ತಮಸ್ಸನ್ನು ಕ್ರಿಯಾಶೀಲ ರಜಸ್ಸಿನಿಂದ ಜೈಸಿ ಆ ರಜಸ್ಸನ್ನು ಪ್ರಕಾಶನಶೀಲ ಸತ್ವದಿಂದ ಜೈಸಿ, ಆತ್ಮ ಶಕ್ತಿ ವಿಕಾಸ, ಅಂತರಂಗದ ಪ್ರಕಾಶದಿಂದ ಅಪೂರ್ಣದಿಂದ ಪೂರ್ಣದೆಡೆಗೆ, ಮೃಣ್ಮಯದಿಂದ ಚಿನ್ಮಯದೆಡೆಗೆ, ಚಿತ್ತಿನಿಂದ ಸಂವಿತ್ತಿನೆಡೆಗೆ, ಮಹತ್ತಿನಿಂದ ಮಹತ್ತರದೆಡೆಗೆ, ಬೃಹತ್ತಿನಿಂದ ಬೃಹತ್ತರದೆಡೆಗೆ, ಶಿವದಿಂದ ಶಿವತರದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಅಸತ್ಯದಿಂದ ಸತ್ಯದೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ, ಶಕ್ತಿಯ ಶೋಧನೆ ಬೋಧನೆಯಿಂದ ಶಿವದ ಆರಾಧನೆ ಸಾಧನೆಯ ಕಡೆಗೆ ನಿರಂತರವಾಗಿ ನಡೆದಿರುವ ಅವಿಚ್ಛಿನ್ನ ವ್ಯಾಪಾರ ಅದು, ಅತ್ತ ನಡೆದಿದೆ ಶಕ್ತಿಯ ಸಹಾಯದಿಂದ ಶಿವನ ಪ್ರಯೋಗ ಶಾಲೆ ವಿಶ್ವ ಪ್ರಕೃತಿ; ಇತ್ತ ನಡೆದಿದೆ ಅಂತಃ ಶಕ್ತಿಯ ಸಹಾಯದಿಂದ ಶಿವದ ಪ್ರಯೋಗ ಶಾಲೆ; ಮಾನವ ಪ್ರಕೃತಿ ! ಇವೆರಡರ ಪ್ರಯೋಗಗಳನ್ನು ಪ್ರಾತಿಭ ಚಕ್ಷುವಿನಿಂದ ಪರಿಗ್ರಹಿಸಿ, ಪರೀಕ್ಷಿಸಿ ಪ್ರತಿಭೆಯ ಸಹಾಯದಿಂದ ಪೂರ್ಣದ ಮಾದರಿಗಳನ್ನು ನಿರ್ಮಿಸಿ ಜನತೆಯ ಮುಂದಿಟ್ಟು ಅವುಗಳ ಸಾಧನೆಗಾಗಿ ಶಕ್ತಿ ಸಂದೇಶ ಬೀರಿ ಅದಕ್ಕೆ ಸಹಾಯಕವಾಗಿ ಜೀವನದ ನೆಲೆ ಬೆಲೆಗಳನ್ನು ನಿರ್ಣಯಿಸಿ, ನಿದರ್ಶಿಸಿ, ಪ್ರದರ್ಶಿಸಿ, ಜೀವನದ ಶಕ್ಯತೆ ಸಂಭಾವ್ಯತೆಗಳ ( *Possibilities and potentialities* )



ನಿರಂತರ ವಿಸ್ತರಿತ ಲೋಕದತ್ತ, ಚಿರಂತನ ವಿಕಸನ ಪ್ರಕಾಶನಶೀಲ ಜಗತ್ತಿನತ್ತ ಕರೆದೊಯ್ಯುವವನು ಕಲೆಗಾರ. ಇರುವುದನ್ನು ವಿಮರ್ಶಿಸಿ, ಆಗುವುದನ್ನು ಅತಿಕ್ರಮಿಸಿ, ಆಗಬೇಕಾದುದನ್ನು ನಿದರ್ಶಿಸಿ, ಅತ್ತ ಸಾಗಲು ಸಮಾಜದಲ್ಲಿ ಶಕ್ತಿ ಸಂಚಾರ ಚೈತನ್ಯಪ್ರಸಾರ, ಆದರ್ಶ ಪ್ರಿಯತೆಗಳ ಪ್ರಚಾರಗೈದು, ಹೊಸ ಯುಗದ ಹೊಸ ಜಗದ ಸಂಚಕಾರ, ಅಂಚೆಕಾರನಾಗುವವನು ಸಾಹಿತಿ, ಕವಿ, ಕಲೆಗಾರ. ಮನುಷ್ಯನು ಕರ್ಮದ ಗೊಂಬೆಯಲ್ಲ, ಪರಿಸ್ಥಿತಿಯ ದಾಸನಲ್ಲ, ಪ್ರಕೃತಿಯ ತೊತ್ತಲ್ಲ, ಸೋಲನ್ನೊಪ್ಪಿ ಶರಣಾಗತನಾಗಿ ಹುಲು ಬಾಳು ಹೊರೆಯುವ ಹೇಡಿಯಲ್ಲ – ಮುಕ್ತಾತ್ಮ, ಸ್ವತಂತ್ರ ಜೀವಿ, ತನ್ನ ಜೀವನಕ್ಕೆ ತಾನೇ ಭಾಗ್ಯವಿಧಾತ, ಜೀವನದ ಶಕ್ಯತೆ ಸಂಭಾವ್ಯತೆಗಳಲ್ಲಿ ನಿಷ್ಠಾವಂತ, ಹೆಚ್ಚು ಹೆಚ್ಚು ಪೂರ್ತತೆಗಾಗಿ ಪ್ರಯತ್ನಿಸುವ ಕ್ರಿಯಾ ವೀರನೆಂದು ಸಮರ್ಥಿಸಿ ಸಿದ್ಧಗೊಳಿಸಿ, ಜೀವ ರಥೋತ್ಸವದಲ್ಲಿ ಪಾರ್ಥಸಾರಥಿಯಾಗಿ ಶಕ್ತಿಯ ಅಶ್ವಗಳು ದಾರಿ ತಪ್ಪದಂತೆ ಶಿವದ ಕಡಿವಾಣ ಜಗ್ಗಿ, ಶಿವವು ಸತ್ವವಿಹೀನವಾಗದಂತೆ ಶಕ್ತಿ ಪಾನ ಮಾಡಿಸಿ ಪೂರ್ಣತೆಗಾಗಿ ನಡೆದಿರುವ ಪಾಣಿಪತ್ತನ್ನು ಗೆಲ್ಲಲು ಪ್ರೇರಿಸುವ, ಪ್ರಚೋದಿಸುವ ಪ್ರಚಂಡ ಶಕ್ತಿ, ಚೈತನ್ಯ ಜ್ಯೋತಿ, ಪ್ರಾಣ ಸಂಚಾರಿ ಕವಿ – ಸಾಹಿತಿ–ಕಲೆಗಾರ ! ಅವನು ಇರುಹಿನ ಕುರುಹಲ್ಲ, ಬರುವಿನ ಅರುಹು ಅವನ ಕೃತಿ ಅನುಕರಣವಲ್ಲ, ಅತಿ ಕ್ರಮಣ! ಅವನದು ವಾಸ್ತವತೆಯಲ್ಲ, ಅತಿವಸ್ತುವಾದವಲ್ಲ, ಪರಂಪರಾ ಪ್ರಿಯತೆಯಲ್ಲ, ಗೂಢಗುಂಜನವಾದವಲ್ಲ, ಸಾಮ್ಯವಾದವಲ್ಲ, ಸಾಮ್ರಾಜ್ಯವಾದವಲ್ಲ, ಪೂಂಜೀವಾದವಲ್ಲ– ಪಕ್ಷಪಂಥ ಪ್ರಚಾರಿತ ಯಾವ ವಾದವೂ ಅಲ್ಲ. ಅವನದು ಅಖಂಡ ಅನಂತ ಆಶಾವಾದ, ಶಿವಶಕ್ತಿ ಸಮನ್ವಯದಿಂದ ಪೂರ್ಣ ಮಾನವನಿರ್ಮಾಣದ

ಆದರ್ಶವಾದ ಶಿವವೆಂದರೆ ಬೃಹಜೀವನದ ದರ್ಶನ, ಶಕ್ತಿಯೆಂದರೆ ಆ ಬೃಹಜ್ಜೀವನದ ಉತ್ಕಟೇಚ್ಛೆ ಅಮಂಗಳವನ್ನು ಎಂದರೆ ಅಪೂರ್ಣ ಮಂಗಳವನ್ನು ಮಂಗಳವನ್ನಾಗಿ ಮಾರ್ಪಡಿಸುವುದೇ ಶಕ್ತಿ. ಬೃಹಜ್ಜೀವನದ ಸಾಧನೆಯಲ್ಲಿ ಅಡ್ಡಬರುವ ಅಶುಭವನ್ನು ಶಿವವನ್ನಾಗಿ ಮಾರ್ಪಡಿಸುವುದೇಶಕ್ತಿ. “ಜ್ಞಾನವನ್ನು ದುರುಪಯೋಗ ಗೈವ ಮೂರ್ಖರನ್ನುಸದೆ ಬಡಿವುದೇ ಶಕ್ತಿ!” ( ಜಿ. ಬಿ. ಷಾ. )

‘ *What is goodness. , – an extented vision of his true self the knowledge of what is yet to become, not what he is. What is will ? --- the suprence wish of the larger life, whose greater portion is out of our persent reach*’ Rabindranath Tagore ಕಾರಣ ಏನಾಗ ಬೇಕಾಗಿದಿಯೋ ಅದರ ‘ದರ್ಶನ’ ಮತ್ತು ಅದರ ಉತ್ಕಟೇಚ್ಛೆಯನ್ನು ಹುಟ್ಟಿಸಿ ಸಾಹಿತಿ ವಿಶ್ವವಾಣಿಯ ಪ್ರತಿನಿಧಿಯಾಗುತ್ತಾನೆ, ಮಾನವತೆಯ ಅಂತರ್ವಾಣಿಯ ಅಭಿವ್ಯಕ್ತಿಯಾಗುತ್ತಾನೆ, ಇಂದಿನ ನೋಟಕಾರನೂ, ನಾಳಿನ ಮುನ್ನೋಟಕಾರನೂ ಆಗುತ್ತಾನೆ. ಸಸ್ಯಸೃಷ್ಟಿಯಲ್ಲಿ ಜೀವನಾಡಿ ಮಿಡಿಯುತ್ತಿರುವದನ್ನು ಅನುಭವಿಸಿದ ಉಪನಿಷತ್ಕಾರರೂ, ವಡ್ಸವರ್ಥನಂಥ ಕವಿಗಳೂ, ಅದನ್ನು ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧಮಾಡಿ ತೋರಿದ ಜಗದೀಶ ಚಂದ್ರಬೋಸರೂ ಇಬ್ಬರೂ ಕವಿಗಳು; ಗೋರಕ್ಷನಾಥನು ಅಲ್ಲಮನ ದೇಹವನ್ನು ಖಡ್ಗದಿಂದ ಖಂಡಿಸಿದರೂ ಗಾಳಿಯನ್ನು ಭೇದಿಸಿ ದಂತಾಯ್ತೆಂದು ಹಾಡಿದ ಕನ್ನಡಕವಿ ಇಂದು ಜಡಚೇತನಗಳು ಅಭಿನ್ನವೆಂದು ಹೇಳುವ ವಿಜ್ಞಾನಿಗಳ ಮುನ್ನೋಟಕಾರ; ವಿವರ್ತನವು ವಿಫಲವಲ್ಲವೆಂದ ಎಮರ್ಸನ್ ಮೊದಲಾದ ದಾರ್ಶನಿಕರು ಇಂದಿನ ಅದೇ ವಿಚಾರಗಳ ವಿಜ್ಞಾನಿಗಳ ಮುನ್ನೋಟ



ಕಾರರು. ಗಾಳಿಯಲ್ಲಿ ಹಾರುವದು ಶಕ್ಯವೆಂದು ಕಲ್ಪಿಸಿ ಕಾದಂಬರಿ ಬರೆದ ವೆಲ್ಸ ಇಂದಿನ ವಾಯುವಿಹಾರದ ಮುನ್ನೋಟಗಾರ. “ *The prophesying soul of the great poet expresses, not it self, but the prophatic soul of the great world on things to come.* ”

ಹೀಗೆ ಸಾಹಿತ್ಯವು ಇಪ್ಪುದನ್ನೂ, ಅಪ್ಪುದನ್ನೂ, ಬಪ್ಪುದನ್ನೂ ಒಪ್ಪು ತಪ್ಪು ತೋರಿ ನಿದರ್ಶಿಸಿ ಶಕ್ತಿಯುತ ಶಿವತತ್ವ ಸಾಹಿತ್ಯವಾಗುತ್ತದೆ. ಅದೇ ನಮಗೆ ಬೇಕಾದಸಾಹಿತ್ಯ. ಈ ತೆರನಾದ ಸಾಹಿತ್ಯ ನಮ್ಮಲ್ಲಿ ಈಗಿದ್ದುದಕ್ಕಿಂತಲೂ ಹೆಚ್ಚಾಗಿಬರಲಿ. ಮಾನ್ಯ ಮಾಸ್ತಿಯವರು ಹೇಳುವಂತೆ ‘ಜೀವನದಷ್ಟು ವಿಸ್ತಾರವಾಗುವುದಲ್ಲವೆ ಜೀವನವನ್ನೇ ವಿಸ್ತಾರಗೊಳಿಸುವ ಧ್ಯೇಯದಿಂದ ಆವಿಷ್ಟವಾದ ಸಾಹಿತ್ಯ’ ನಮ್ಮಲ್ಲಿ ಬೆಳೆಯಲಿ ವೀ. ಸೀ. ಯವರಂದಂತೆ ಪರಮ ಶಿವದಕಡೆಗೆ ನೇರವಾಗಿ ಬದುಕನ್ನು ಒಯ್ಯುಬಲ್ಲ. ಕಲೆ ನಮ್ಮಲ್ಲಿ ಕೊನರಲಿ. ಅಂಬಿಕಾತನಯ ದತ್ತರಂದಂತೆ ‘ ಜೀವನದ ಪೂರ್ತತೆಯ ಹವಣಿಕೆಯ ಹೋರಾಟವನ್ನು ತೆರೆದು ತೋರಿಸಲಿ ’ ನಮ್ಮ ಸಾಹಿತ್ಯ. ‘ವಿನಾಯಕ’ರಂದಂತೆ ‘ ಮಾನವ ಜಾತಿಯ ದಿವ್ಯ ಭವಿತವ್ಯತೆಯ ಸಾಫಲ್ಯವನ್ನು ಸಾಧ್ಯವಾಗಿಸಲು ಮೈತಳೆದು ದುಡಿಯಲಿ, ನಮ್ಮ ಸಾಹಿತ್ಯ ಬೃಹಜ್ಜೀವನದ ಜ್ಞಾನವಾದ ಶಿವವನ್ನೂ, ಬೃಹಜ್ಜೀವನದ ಉತ್ಕಟೇಚ್ಛೆಯ ಪ್ರತೀಕವಾದ ಶಕ್ತಿಯನ್ನೂ ಸಂಗಮಿಸಿ, ಅದರ ಸತ್ವಾವೇಶವನ್ನೂ, ಅದಕ್ಕನುಗುಣವಾದ ಹೊಸಭಾವನಾ ಪ್ರಪಂಚವನ್ನೂ ಹೊಸ ಆಶೋತ್ತರಗಳನ್ನೂ, ಮಹದ್ಭಾವನೆ ಮಹದಾಲೋಚನೆ ಮಹದಾಶೆಗಳನ್ನೂ ಶಕ್ತಿಯುತವಾಗಿ, ವೀರ್ಯವತ್ತಾಗಿ, ಸತ್ವಪೂರ್ಣವಾಗಿ ಬಿತ್ತರಿಸಲಿ ನಮ್ಮ ಸಾಹಿತ್ಯ. ಆ ವಿರಾಟ್ ದರ್ಶನವನ್ನು ಪಡೆದು ಅದರ ಸಾಮರ್ಥ ಪೂರ್ಣ ಅಭಿವ್ಯಕ್ತಿಗಾಗಿ ತೇಜೋಽಸಿ

ತೇಜೋಮಯಿ ಧೇಹಿ, ಓಜೋಽಸಿ ಓ ಜೋ ಮಯಿಧೇಹಿ, ಬಲಮಸಿ ಬಲಂ ಮಹಿಧೇಹಿ ಎಂದು ಶಕ್ತಿಸಾಕ್ಷಾತ್ಕಾರಕ್ಕಾಗಿ ಹಂಬಲಿಸಲಿ. ನಮ್ಮ ಸಾಹಿತಿ. ' ನಾಯಮಾತ್ಮಾ ಬಲಹೀನೇನ ಲಭ್ಯಃ ಆತ್ಮಶಕ್ತಿ ವಿಕಾಸದಲ್ಲಿ ಮಗ್ನನಾಗದೆ ಪರರ ಕುತ್ಸಿತ ಟೀಕೆ, ನಿಂದೆ, ಅವಹೇಳನ, ಆತ್ಮಪ್ರಸಂಶ ಗಳಲ್ಲಿ ಅನುರಕ್ತನಾಗುವವನು ಊರ್ಧ್ವಗಾಮಿಯಾಗದೆ ಅಧೋಗಾಮಿ ಯಾಗುವದು ನಿಶ್ಚಯ. ಈ ಅಧೋಮುಖ ಪ್ರವೃತ್ತಿ Do not dragging mentality ) ಹೋಗಿ ನಮ್ಮಲ್ಲಿ ತಮ್ಮ ಶಕ್ತಿಯನ್ನು ತಾವೇ ಅತಿಕ್ರಮಿಸುತ್ತ ಹೋಗುವ ಹೆಬ್ಬಯಕೆ ಬೆಳೆಯಲಿ. In imitating the divine Shakespeare I have ~~exdelted~~ Excelled myself, ಎಂದು ಡ್ರಾಯ್ಡನ್ನನೆಂದಂತೆ ನಮ್ಮ ಸಾಹಿತಿಗಳೂ ತಮ್ಮನ್ನು ತಾವೇ ಹಿಂದುಳಿಸಿ ಮುಂದೆ ಹೋಗಲು ಪ್ರಯತ್ನಿಸಲಿ. ರವೀಂದ್ರರ ಅಮರ ಕಾವ್ಯಶಕ್ತಿಯ ರಹಸ್ಯ ಅವರು ತಮ್ಮನ್ನು ತಾವೇ ಮೀರುತ್ತ ಹೋದುದೆಂದು ಹೇಳುತ್ತಾರೆ. ಹಾಗೆ ನಮ್ಮ ಸಾಹಿತಿಗಳು ತಮ್ಮನ್ನು ತಾವು ಮೀರುತ್ತ ಮಹಾಸಾಹಿತಿಗಳಾಗಬೇಕಾದರೆ ತಮ್ಮ ಶಕ್ತಿಯ ನಿರಂತರ ವಿಕಾಸವೇ ಮಾರ್ಗ– ಆತ್ಮ ಪ್ರಸಂಸೆಯಲ್ಲ, ಪರನಿಂದೆಯಲ್ಲ.

ಈ ದೃಷ್ಟಿಯಿಂದ ನೋಡಿದರೆ ನಮ್ಮ ಹಿಂದಿನ ಸಾಹಿತ್ಯವು ಹೆಮ್ಮೆಯನ್ನು ಹುಟ್ಟಿಸುತ್ತಿದೆ. ಆತ್ಮ ಶ್ರೀ ವೀರಶ್ರೀಗಳೆಂಡಕ್ಕೂ, ಶಿವ ಶಕ್ತಿಗಳೆರಡಕ್ಕೂ ಅದರಲ್ಲಿ ಸಮಾನ ಸ್ಥಾನಸಿಕ್ಕಿದೆ. ಆದಿ ಪುರಾಣದ ಜತೆಗೆ ವಿಕ್ರಮಾರ್ಜುನ ವಿಜಯ, ಗದಾಯುದ್ಧದ ಜತೆಗೆ ಅಜಿತ ತೀರ್ಥಂಕರ, ಭಕ್ತಸ್ಥಲದ ಜತೆಗೆ ಮಹೇಶ ಸ್ಥಲ, ಸಂಗಯ್ಯನ ಜತೆಗೆ ಕಲಿದೇವರದೇವ, ಗಂಡುಗಾಡಿಗೆದುರಾಗಿ ಹೆಣ್ಣು ಮೋಡಿ, ಶರಣರಗಳೆಯ ಜತೆಗೆ ತಾರಕಾ ಹುಂಕಾರ ಸಂಹಾರ, ಜಗನ್ನಾಥನ ಅಸುರಸಂಹಾರ ಲೀಲೆ. ಕೃಷ್ಣನ ಕೌರವ ಸಂಹಾರ ಲೀಲೆಯ ಜತೆಗೆ ದಾಸಕೂಟದ ಆತ್ಮರತಿಲೀಲೆ, ಸಿದ್ಧರಾಮ ಪುರಾಣದ ಜತೆಗೆ ವೀರೇಶ್ವರ ಚರಿತ್ರೆ, ಬಸವರಾಜ ವಿಜಯದ ಪಕ್ಕದಲ್ಲಿ ಕಿರಾತಾರ್ಜುನ ಕಾಳಗ, ಶರಣರ ಪಕ್ಕದಲ್ಲಿ ಸರ್ವಜ್ಞ. ಹೀಗೆ ಭೋಗ ಯೋಗದ ಹದವಾಗಿ, ಜೈನ ವಾಙ್ಮಯ ಮಧುವಾಗಿ, ವಚನ



ಕೃಷ್ಣನ ವಧುವಾಗಿ, ಮುದ್ದು ವಿಠ್ಠಲನ ದಾಸಿಯಾಗಿ, ಮುದ್ದಣ್ಣನ ಅಳ್ಳಿ ನಾಶಿನ ಪ್ರೇಮರಾಶಿಯಾಗಿ, ಶಿವಶಕ್ತಿಗಳ ತುಂಗಭದ್ರೆಯಾಗಿ, ಗಂಗಾ ಯಮುನೆಯಾಗಿ ಕಾಲಕಾಲಕ್ಕೆ ಕ್ರಾಂತಿ ಹೊಂದುತ್ತ ಕಾಲ ಕಳೆದಂತೆ ವಿಶಾಲ ವಿಸ್ತೃತವಾಗುತ್ತ; ಪ್ರತಿ ಯುಗಕ್ಕೊಂದು ಹೊಸನೋಗ ಪಡೆಯುತ್ತ ಬಹುಮುಖಿಯಾಗಿ, ಬಹು ರೂಪಿಣಿಯಾಗಿ ಬೆಳೆದು ಬಂದಿದ್ದಾಳೆ. ಬೆಳವಳದ ಸಾಹಿತ್ಯ ಲಕ್ಷ್ಮಿ.

ಇಂದಿನ ಸಾಹಿತ್ಯವು ಆಶಾದಾಯಕವಾಗಿದೆ. ಅದರ ಅಂತಃಪ್ರವಾಹಗಳು ಅನಂತವಾಗಿದ್ದರೂ ಅದರ ಏಕಪ್ರವಾಹಕ್ಕೆ ಧಕ್ಕೆ ಬಂದಿಲ್ಲ. ಭಾಷೆ ಭಾವಗಳಲ್ಲಿ ಅದು ಕನ್ನಡ ಆಂಗ್ಲ ಸಂಸ್ಕೃತಗಳ ತ್ರಿವೇಣೀ ಸಂಗಮವಾಗಿ ಹರಿಯತೊಡಗಿದೆ. ವಸ್ತುಗ್ರಹಣದಲ್ಲಿ ಪ್ರಕೃತಿ, ರಾಷ್ಟ್ರ, ಸಮಾಜಗಳ ತ್ರಿಪುಟಿಯಾಗಿ ಮುಂದುವರಿಯುತ್ತಲಿದೆ. ಗಂಭೀರ, ಲಲಿತ ವ್ಯಂಗ್ಯ ಸಾಹಿತ್ಯಗಳೂ, ಜ್ಞಾನ ಪ್ರಧಾನ, ಭಾವನಾ ಪ್ರಧಾನ, ಶಕ್ತಿಪ್ರಧಾನ, ಸಾಹಿತ್ಯ ರೂಪಗಳೂ, ಪರಂಪರಾಗತ - ನೂತನ - ಸಮ್ಮಿಶ್ರಣ, ಪ್ರಕಾರಗಳೂ, ಬಂಧ, ನಿರ್ಬಂಧ, ಸ್ವಚ್ಛಂದ, ಛಂದಗಳೊ, ವಿಲಾಸ, ನಿರಾಶೆ, ವಿದ್ರೋಹ ವೃತ್ತಿಗಳೂ, ಆತ್ಮಚಿಂತನ, ಸಮಾಜ ಪರೀಕ್ಷಣ, ಮನೋ ವಿಶ್ಲೇಷಣ ವಿಷಯಗಳೂ, ಪ್ರಾಂತೀಯತೆ, ರಾಷ್ಟ್ರೀಯತೆ; ಮಾನವೀಯತೆಯ ವಿಚಾರಧಾರೆಗಳೂ, ಶ್ರೀಮಂತ ವರ್ಗ, ಮಧ್ಯಮ ವರ್ಗ, ದಲಿತ ವರ್ಗಗಳ ಜೀವನ ಚಿತ್ರಗಳೂ, ಸಾರಾಂಶ ಎಲ್ಲಬಗೆಯ ಸಾಹಿತ್ಯ ಕೃತಿಗಳೂ ಹುಟ್ಟುತ್ತಲಿವೆ. ಈ ತ್ರಿಕೋಣ ರೂಪೀ ಪರಿಘದ ಸುತ್ತು ನಮ್ಮ ಸಾಹಿತ್ಯ ಸುತ್ತುತ್ತಲಿದೆ. ಜನಪದ ಸಾಹಿತ್ಯಕ್ಕೆ ಸ್ವತಂತ್ರ ಸ್ಥಾನಸಿಕ್ಕಿದೆ. ಹೆಣ್ಮಕ್ಕಳ ಮಕ್ಕಳ ಸಾಹಿತ್ಯ ಬಹುಮುಖವಾಗಿ ಬೆಳೆಯತೊಡಗಿದೆ. ಇನ್ನು ನಮ್ಮ ಸಾಹಿತ್ಯಕಾರರು ಆಂಗ್ಲ ಐರೋಪ್ಯ ಸಾಹಿತ್ಯಗಳ ಜತೆಗೆ ಏಷ್ಯಾದ ವಿವಿಧ ಸಾಹಿತ್ಯಗಳಕಡೆಗೂ ದೃಷ್ಟಿಹೊರಳಿಸಲಿ; ಹಿಂದುಸ್ತಾನದ ವಿವಿಧ ಸಾಹಿತ್ಯಗಳ ಬಗೆಗೆ ಹೆಚ್ಚಾಗಿ ಲಕ್ಷ್ಯವೀಯಲಿ ತಮ್ಮ ಸಾಹಿತ್ಯ ಕ್ಷೇತ್ರದ ಕ್ಷಿತಿಜವನ್ನು ವಿಸ್ತರಿಸಿ, ತಮ್ಮ ಶಕ್ತಿಯನ್ನು

ವಿವರ್ಧಿಸಿ, ಹೊಸ ಹೊಸ ಬಗೆಯ ಅನೇಕಮುಖವಾದ ಸರ್ವಶ್ರೇಷ್ಠ ಸಾಹಿತ್ಯವನ್ನು ಸೃಷ್ಟಿಸಿ ಮತ್ತೆ ನಮ್ಮ ನಾಡಿಗೆ ಸಾಂಸ್ಕೃತಿಕ ನಾಯಕತ್ವ ದೊರೆಯುವಂತೆಸಗಲಿ. ಇವ ಪ್ರಗತಿಶೀಲ, ಅವ ಪ್ರಗತಿ ಶೂಲವೆಂಬ ಹುಯಿಲು ಹೊಲ್ಲ. ಸಾಹಿತ್ಯದ ಮಾರ್ಗ ವಿಂಗಡಿಕೆಯಲ್ಲ, ಸಂಗಡಿಕೆ, ವಿಕಲನವಲ್ಲ ಸಂಕಲನ ಪ್ರಗತಿಶೀಲರ ಧ್ಯೇಯಗಳನ್ನು ಆರೂ ಅಲ್ಲಗಳೆಯಲಾರರು. ಆದರೆ ಧೋರಣ ತಪ್ಪಿದೆ. ೧೯೩೬ ರಲ್ಲಿ ಲಖ್ನೌದಲ್ಲಿ ಕೂಡಿದ್ದ ಪ್ರಗತಿಶೀಲ ಲೇಖಕರ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿದ್ದ ಮಹಾಸಾಹಿತಿ ಮುನಷಿ ಪ್ರೇಮಚಂದರ ಈ ಮಾತು ಎಲ್ಲರಿಗೆ ದಾರಿ ದೀಪವಾಗಲಿ !

" ಪ್ರಗತಿಶೀಲತೆಯು ನಮ್ಮ ಶೋಧವೆಂದು ನಾವು ತಿಳಿದರೆ ಅದು ನಮ್ಮ ತಪ್ಪು. ಸಾಹಿತಿಗಳ ಹೃದಯಗಳಲ್ಲಿ ರಾಷ್ಟ್ರದ ಸಮಷ್ಟಿಭಾವನೆಗಳು ನರ್ತಿಸುತ್ತಲಿವೆ. ಹಿಂದುಸ್ತಾನದ ಪ್ರತಿಯೊಂದು ಭಾಷೆಯಲ್ಲೂ ಈ ವಿಚಾರ ಬೀಜಗಳನ್ನು ನಿಸರ್ಗ ಹಾಗೂ ಪರಿಸ್ಥಿತಿಗಳೂ ಈ ಮೊದಲೇ ಬಿತ್ತಿಬಿಟ್ಟಿವೆ. ಅವುಗಳಿಗೆ ನೀರೆರೆವುದು ಹಾಗೂ ಈ ಆದರ್ಶಕ್ಕೆ ಪುಷ್ಟಿಯನ್ನೀವುದೂ ನಮ್ಮ ಮನೀಷೆ "

ಶಿವದ, ಶುಭದ, ಮಂಗಲದ ಸಾಧಕರಾದ ಶರಣರೇ, ಶಕ್ತಿಸ್ವರೂಪಿಣಿಯರಾದ ಶರಣೆಯರೇ, ಈ ಸಾಹಿತ್ಯ ಮಂಟಪದಲ್ಲಿ ಈ ಉಚ್ಚಧ್ಯೇಯಧ್ವಜದಡಿಯಲ್ಲಿ ಸಮ್ಮಿಳಿತರಾದ ತಮ್ಮಿಂದ ಹಿಂದೆ ಅನುಭವಮಂಟಪದಲ್ಲಿ ಶರಣ ಶರಣೆಯರಿಂದ ವಚನ ಸಾಹಿತ್ಯವು ಹೊರಬಿದ್ದಂತೆ- ಶುಭಕರವಾದ ಶಕ್ತಿಪೂರ್ಣವಾದ, ಸತ್ವಶಾಲಿಯಾದ ಸಾಹಿತ್ಯವು ಹೊರಹೊಮ್ಮಲಿ. ಅದರ ಅಮೃತಸಿಂಚನದಿಂದ ಕನ್ನಡಿಗರು ಜಗದ ಕಣ್ಣಾಗಲಿ. ನಿಮ್ಮ ಶಕ್ತಿ ಕುಂದದಿರಲಿ, ಉತ್ಸಾಹ ಮಡಗದಿರಲಿ, ಪ್ರತಿಭಾಸಾಧನೆ ನಿಲ್ಲದಿರಲಿ, ಸಾಹಿತ್ಯ ಸೃಷ್ಟಿ ಮಸುಳಿಸದಿರಲಿ. ನಿಮ್ಮ ಪ್ರತಿಭೆಯ ಲೀಲಾವಿಲಾಸಕ್ಕೆ ಬುವಿ - ಬಯಲು - ಬಾನು ಸಾಲದಿರಲಿ, ! ಗಯಟೆಯಂತೆ "ನಾನು ದಣಿದಿಲ್ಲ, ನಾನು ಜಗತ್ತಿನಲ್ಲಿ ಜೀವಿಸುವವರೆಗೆ ಪ್ರತಿದಿನವೂ



...ಡಿಯಷ್ಟು ಹೊಸ ನೆಲವನ್ನಾದರೂ ಹೊಸದಾಗಿ ಆಕ್ರಮಿಸುವುದೇ ...ನ್ನ ಮನೀಷೆ" ಎಂಬುದೇ ನಿಮ್ಮ ಮಹಾದಾಶೆಯಾಗಿರಲಿ ! ಮಿಲ್ಟನ್ನ ...ಂದಂತೆ ' ನಾಳೆ ಬೇರೆ ಬನ ಬೇರೆ ಹುಲ್ಲೆಲಗಳಿಗೆ ' ನಮ್ಮ ಪಯಣ ...ರ್ಣತೆಯತ್ತ ಪಯಣ !

ಕನ್ನಡದ ಕಂದ ಆನಂದರ ಹಾಡಿನಿಂದ ಆರಂಭಿಸಿದ್ದೆ. ಕನ್ನಡದ ಕಾಂಟ್ ನಿಜಗುಣರ ಹಾಡಿನಿಂದ ಮುಗಿಸುತ್ತೇನೆ. ' ಕೋಗಿಲೇ, ದನಿದೋರು, ಮರಹೆಂಬ ಮಾಗಿ ಪೋದುದು, ಕನ್ನಡದ ಕಲೆಯೆಂಬ ಕೋಗಿಲೇ ! ಘನ ವಸಂತವು ಬಂತು, ಸಾಹಿತ್ಯವೆಂಬ ಚಿತ್ರತರ ಕೋ-ಗಿಲೆ - ದನಿದೋರು !

ಶರಧಿಯ ಮೊರಹಿನಂತೆ ಘನಘೋಷದಂತೆ ನಿ । ರ್ಘರರವದಂತೆ ದುಂದುಭಿ ಸ್ವನದಂತೆ ಕೋಗಿಲೆ । ವರನಾದದಂತೆ ಘಂಟಾ ನಿನಾದದಂತೆ ಬಂ । ಧುರದ ಶಂಖಧ್ವಾನದಂತೆ ಕೋಗಿಲೆ । ಮುರಜಯ ಸ್ವನದಂತೆ ವಾಸವದ ಧ್ವನಿಯಂತೆ। ಮೊರೆವಳಿಯ ಝೇಂಕಾರದಂತೆ ಕೋಗಿಲೆ! ನೆರೆದ ಕಿಂಕಿಣಿಯ ಮೆಲ್ಲುಲಿಯಂತೆ ವೀಣೆಯಿಂ । ಚರದಂತೆ ಪೊಸಪರಿಗಳಿಂದ ಕೋಗಿಲೆ ದನಿದೋರು "

**॥ ಜಯ ಕರ್ನಾಟಕ ಮಾತೆ ॥**